ದೆಹಲಿ ಕರ್ನಾಟಕ ಸಂಘದ

# ಅಭಿಮತ

ಜುಲೈ 2023
ಬೆಲೆ ರೂ.1



ಶ್ರೀ ಸಿದ್ದರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು



ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು




ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ

## ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸ್ಮರಣ ಸಂಚಿಕೆ "ಬಾರಿಸು ಕನ್ನಡ ಡಿಂಡಿಮವ" ಬಿಡುಗಡೆ ಮಾಡಲಾದ ಸಂದರ್ಭ



ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸಂದರ್ಭದಲ್ಲಿ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರನ್ನು ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಮತ್ತು ಪದಾಧಿಕಾರಿಗಳು ಇತ್ತೀಚೆಗೆ ಭೇಟಿಯಾಗಿದ್ದರು. ಈ ಹಿಂದೆ ಮೂರ್ನಾಲ್ಕು ಬಾರಿ ಮಾನ್ಯ ಮುಖ್ಯಮಂತ್ರಿಗಳು ದೆಹಲಿ ಕರ್ನಾಟಕ ಸಂಘಕ್ಕೆ ಬಂದು ಕಾರ್ಯಕ್ರಮದಲ್ಲಿ ಭಾಗಿಯಾಗಿ ದೆಹಲಿ ಕರ್ನಾಟಕ ಸಂಘದ ಕೋರಿಕೆಗಳನ್ನು ಈಡೇರಿಸಿದ್ದಾರೆ. ಈ ಬಾರಿಯೂ ಹೊಸದಾಗಿ ಆಯ್ಕೆಯಾಗಿ ಬಂದಂತಹ ಮಾನ್ಯ ಮುಖ್ಯಮಂತ್ರಿಗಳನ್ನ ಭೇಟಿ ಮಾಡಿದ ಸಂದರ್ಭ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಮತ್ತು ಸದಸ್ಯರ ಪರವಾಗಿ ಅವರಿಗೆ ಅಭಿನಂದಿಸಲಾಯಿತು. 2015ರಲ್ಲಿ ಜವಾಹರಲಾಲ್ ನೆಹರು ಜೆಎನ್‌ಯು ನಲ್ಲಿ ಕನ್ನಡ ಅಧ್ಯಯನ ಪೀಠ ಆರಂಭಿಸಲು ಆಗಲೂ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಶ್ರೀ ಸಿದ್ದರಾಮಯ್ಯನವರ ಕೊಡುಗೆ ಅಪಾರ. ಅದನ್ನು ಅವರಿಗೆ ನೆನಪು ಮಾಡಿಸಿ, ಜೊತೆಗೆ ಇನ್ನು ದೆಹಲಿ ಕರ್ನಾಟಕ ಸಂಘದ ಅನೇಕ ಕಾರ್ಯಗಳ ಕೆಲಸಗಳ ಜೊತೆ ನಿಲ್ಲಬೇಕೆಂದು ಶ್ರೀ ಸಿ.ಎಂ, ನಾಗರಾಜ ಅವರು ಮುಖ್ಯಮಂತ್ರಿಗಳನ್ನು ಕೇಳಿಕೊಂಡರು.

ಈ ಅಮೃತ ಮಹೋತ್ಸವ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘಕ್ಕೆ ಒಂದು ಜಾಗವನ್ನು ನೋಡುತ್ತಿದ್ದು ಇದಕ್ಕೆ ಈಗಾಗಲೇ ಪ್ರಸ್ತಾವನೆಯನ್ನು ಸಹ ಸರ್ಕಾರಕ್ಕೆ ನೀಡಿದ್ದು, ತಮ್ಮ ಸಹಕಾರ ಅಗತ್ಯ ಎಂದು ಕೇಳಿಕೊಂಡಾಗ ತಪ್ಪದೇ ಈಡೇರಿಸಲು



ಮತ್ತು ಮುಂಬರುವ ಸಂಘದ ಯಾವುದಾದರೂ ಒಂದು ಕಾರ್ಯಕ್ರಮದಲ್ಲಿ ಬಂದು ಭಾಗಿಯಾಗಲು ಮಾನ್ಯ ಮುಖ್ಯಮಂತ್ರಿಗಳು ಭರವಸೆ ನೀಡಿದ್ದಾರೆ. ಮುಖ್ಯಮಂತ್ರಿಗಳ ಜೊತೆ ಆಯ್ಕೆಯಾದ ಎಲ್ಲಾ ಅವರ ಮಾನ್ಯ ಕ್ಯಾಬಿನೆಟ್ ಮಂತ್ರಿಗಳಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಶುಭಾಶಯಗಳು.



ರಾಜ್ಯದ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವರಾದಂತಹ ಮಾನ್ಯ ಶ್ರೀ ಕೆ.ಎಚ್. ಮುನಿಯಪ್ಪನವರನ್ನು ಸಹ ಭೇಟಿ ಮಾಡಿ ಸಂಘದ ಪರವಾಗಿ ಅವರನ್ನು ಅಭಿನಂದಿಸಲಾಯಿತು. ಶ್ರೀ ಕೆ.ಎಚ್. ಮುನಿಯಪ್ಪನವರ ಮತ್ತು ದೆಹಲಿ ಕರ್ನಾಟಕ ಸಂಘದ ಸಂಬಂಧ ತುಂಬಾ ಹಳೆಯದ್ದು. ಸುಮಾರು ಏಳು ಬಾರಿ ಸಂಸದರಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಅನೇಕ ಬಾರಿ ದೆಹಲಿ ಕರ್ನಾಟಕ ಸಂಘಕ್ಕೆ ಬಂದು ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ನಮ್ಮ ಜೊತೆ ಸಹಕಾರ ನೀಡಿರುವ ಶ್ರೀ ಕೆ.ಎಚ್. ಮುನಿಯಪ್ಪನವರಿಗೆ ಹಾರ್ದಿಕ ಶುಭಾಶಯಗಳು.

ಅಭಿಮತ
ದೆಹಲಿ ಕರ್ನಾಟಕ ಸಂಘದ
ಸಂಪುಟ 33 । ಸಂಚಿಕೆ 10
ಜುಲೈ 2023

**ಅಭಿಮತ ಸಂಪಾದಕ ಮಂಡಳಿ**

ಪ್ರಧಾನ ಸಂಪಾದಕ
ಕೆ.ಎಸ್. ಮೂರ್ತಿ

ಸಂಪಾದಕ ಮಂಡಳಿ ಸದಸ್ಯರು
ಯಲ್ಲಾಲಿಂಗ ಕೊಪ್ಪದ
ತಿಮ್ಮಪ್ಪ ಬಿ.ಆರ್.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

ಅಧ್ಯಕ್ಷರು
ಸಿ.ಎಂ. ನಾಗರಾಜ

ಉಪಾಧ್ಯಕ್ಷರು
ಡಾ. ಎಂ.ಎಸ್. ಶಶಿ ಕುಮಾರ್
ಪೂಜಾ ಪಿ. ರಾವ್

ಪ್ರಧಾನ ಕಾರ್ಯದರ್ಶಿ
ಆರ್. ರೇಣುಕುಮಾರ್

ಕೋಶಾಧಿಕಾರಿ
ರಾಧಾಕೃಷ್ಣ

ಜಂಟಿ ಕಾರ್ಯದರ್ಶಿಗಳು
ಬಿ. ನಾರಾಯಣ
ಸುಮಿತಾ ಮುರಗೋಡ

ಸಮಿತಿ ಸದಸ್ಯರು
ಪ್ರಭಾಕರ ಮಡ್ಡಿತೋಟ್
ಶಿವಪ್ಪ ಎಂ
ಎ.ಟಿ. ಶ್ರೀನಿವಾಸ
ಮಾಲಿನಿ ಪ್ರಹ್ಲಾದ್
ಕೆ.ಎಸ್. ಮೂರ್ತಿ
ನವೀನ್ ಕುಮಾರ್ ವಿ.
ಸವಿತಾ ನೆಲ್ಲಿ
ಅಶ್ವಿನಿ ಬಿ.ಎಸ್.
ಸಂತೋಷ ಜೆ
ಚಂದ್ರಶೇಖರ ಎನ್.ಪಿ.

**ಕಾವಲು ಸಮಿತಿ**

ಅನಂತರಾಮ ಅರಳ
ಸಂಜೀವ ದೇಶಪಾಂಡೆ
ಐ. ಶಂಭುಲಿಂಗಪ್ಪ

## ಸಂಪಾದಕೀಯ

### 'ಪರಿಸರ ರಕ್ಷಿಸಿ, ಮನುಕುಲ ಉಳಿಸಿ, 'ಹಸಿರೇ ಉಸಿರು, ಉಸಿರೇ ಜೀವನ, ಯೋಗ ಫಾರ್ ವಸುದೈವ ಕುಟುಂಬಕಂ'

ಆತ್ಮೀಯ ಅಭಿಮತ ಓದುಗರಿಗೆ ನಮಸ್ಕಾರ, ಜೂನ್ ತಿಂಗಳಿನಲ್ಲಿ ಆಚರಿಸಲಾದ **'ವಿಶ್ವ ಪರಿಸರ ದಿನ'**, **'ಅಂತರರಾಷ್ಟ್ರೀಯ ಯೋಗ ದಿನ'**, **'ಅಂತರರಾಷ್ಟ್ರೀಯ ಅಪ್ಪಂದಿರ ದಿನ'** ಹಾಗು ಬೆಂಗಳೂರು ನಗರ ನಿರ್ಮಾತೃ **ನಾಡಪ್ರಭು ಕೆಂಪೇಗೌಡರ** 514 ನೇ ಜನ್ಮ ಜಯಂತಿಯ ಹಾರ್ದಿಕ ಶುಭಾಶಯಗಳು.

ಬಂಧುಗಳೇ, ನಮ್ಮ ಸುತ್ತಮುತ್ತಲಿನ ಪರಿಸರದ ರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ. ನೆಲ, ಜಲ, ವಾಯು, ಪ್ರಾಣಿ, ಪಕ್ಷಿ ಸಂಕುಲ, ಗಿಡ, ಮರಗಳೊಂದಿಗೆ ಸಮತೋಲನ ಸಾಧಿಸದಿದ್ದರೆ ಪ್ರಕೃತಿ ವಿಕೋಪಗಳನ್ನು ನಾವು ಎದುರಿಸಬೇಕಾಗುತ್ತದೆ. ಇತ್ತೀಚಿನ ದಿನಗಳಲ್ಲಿ ನಾವು ಕಂಡ ಬಿಪರ್‌ಜಾಯ್ ಚಂಡಮಾರುತ, ಉತ್ತರ ಭಾರತದಲ್ಲಿ ವಿಪರೀತ ಮಳೆ, ಭೂಕುಸಿತ, ನದಿಗಳ ರುದ್ರಾವತಾರ, ಪ್ರವಾಹ, ದಕ್ಷಿಣ ಭಾರತದ ಹಲವೆಡೆ ಅತಿವೃಷ್ಟಿ, ನಗರಗಳಲ್ಲಿ ನೆರೆ ಇವುಗಳಿಗೆಲ್ಲ ಕಾರಣ ಕಾಡು ನಾಶ, ಅವೈಜ್ಞಾನಿಕ ನಗರೀಕರಣ, ಗ್ಲೋಬಲ್ ವಾರ್ಮಿಂಗ್, ಗ್ರೀನ್ ಹೌಸ್ ಎಫೆಕ್ಟ್. ಮುಂತಾದ ಮಾನವ ನಿರ್ಮಿತ ಸಮಸ್ಯೆಗಳು. ಜೂನ್ 5ರ ವಿಶ್ವ ಪರಿಸರ ದಿನಾಚರಣೆ ಕೇವಲ ಒಂದು ದಿನಕ್ಕೆ ಸೀಮಿತವಾಗದೆ, ನಮ್ಮ ವೃಕ್ಷ ಮಾತೆಯರಾದ ಪದ್ಮಶ್ರೀ ಸಾಲುಮರದ ತಿಮ್ಮಕ್ಕ, ಪದ್ಮಶ್ರೀ ತುಳಸಿ ಗೌಡರವರಿಂದ ಪ್ರೇರಣೆ ಪಡೆದು ನಮ್ಮ ಪ್ರಕೃತಿಯನ್ನು ಕಾಪಾಡದಿದ್ದರೆ ಮುಂದಿನ ದಿನಗಳಲ್ಲಿ ಗಂಡಾಂತರ ತಪ್ಪಿದಲ್ಲ ಎಂದು ಒಬ್ಬ ಸಿವಿಲ್ ಮತ್ತು ಪರಿಸರ ಇಂಜಿನಿಯರ್ ಆಗಿರುವ ನನ್ನ ಭಾವನೆ. ಈ ದೃಷ್ಟಿಯಲ್ಲಿ ಬೆಂಗಳೂರಿನ ಸ್ಥಾಪಕ ನಾಡಪ್ರಭು ಕೆಂಪೇಗೌಡರು ಆ ಕಾಲದಲ್ಲೇ ತಮ್ಮ ದೂರದೃಷ್ಟಿತ್ವದಿಂದ ಯಾವ ವಾಸ್ತುಶಿಲ್ಪಿ ಅಥವಾ ಇಂಜಿನಿಯರ್‌ಗಿಂತಲೂ ಕಡಿಮೆ ಎನ್ನದೇ ಭವ್ಯ ನಗರ ನಿರ್ಮಾಣದ ಕನಸು ಕಂಡು ಅದನ್ನು ಸಾಕಾರಗೊಳಿಸಿದ್ದು, ಇಂದು ಬೆಂಗಳೂರು ವಿಶ್ವದಲ್ಲೇ ಅತ್ಯಂತ ಪ್ರತಿಷ್ಠಿತ ಆಧುನಿಕ ಮಹಾನಗರಗಳಲ್ಲೊಂದಾಗಿರುವುದು ಗೌರವದ ವಿಷಯ. ಆ ಮಹಾ ನಾಯಕ ನಾಡಪ್ರಭು ಕೆಂಪೇಗೌಡರಿಗೆ ನನ್ನ ನಮನಗಳು.


ಇನ್ನು, ಯೋಗವು ವಿಶ್ವಕ್ಕೆ ಭಾರತ ನೀಡಿರುವ ಅತ್ಯಮೂಲ್ಯ ಕೊಡುಗೆ. ಭಾರತದ ಸತತ ಪ್ರಯತ್ನದಿಂದ 2014 ರಲ್ಲಿ ವಿಶ್ವಸಂಸ್ಥೆಯು ಜೂನ್ 21ನ್ನು ಅಂತರರಾಷ್ಟ್ರೀಯ ಯೋಗ ದಿನವನ್ನಾಗಿ ಘೋಷಣೆ ಮಾಡಿದ್ದು, ನಮ್ಮ ಹೆಮ್ಮೆಯ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ಈ ವರ್ಷ, 9ನೇ ವಿಶ್ವ ಯೋಗ ದಿನವನ್ನು ನ್ಯೂಯಾರ್ಕ್‌ನ ವಿಶ್ವಸಂಸ್ಥೆಯ ಮುಖ್ಯ ಕಚೇರಿ ಎದುರು ಹಲವಾರು ದೇಶಗಳ ಪ್ರತಿನಿಧಿಗಳ ಜೊತೆ ಆಚರಿಸಿದ್ದು, ತನ್ಮೂಲಕ **'ಯೋಗ ಫಾರ್ ವಸುದೈವ ಕುಟುಂಬಕಂ'** ಎಂಬ ಥೀಮ್ ಸಾರಿದ್ದು ನಮಗೆಲ್ಲ ಹೆಮ್ಮೆ, ಹೆಗ್ಗಳಿಕೆಯ ವಿಷಯ. ಯೋಗವು ನಮ್ಮ ಪ್ರತಿ ನಿತ್ಯ ದಿನಚರಿಯ ಭಾಗವಾಗಬೇಕು. ಸ್ವಾಸ್ಥ ದೇಹ, ಸದೃಢ ಮನಸ್ಸು ಎಂಬಂತೆ ದೈಹಿಕ ಮತ್ತು ಮಾನಸಿಕ ಆರೋಗ್ಯ ಹೊಂದಲು ಯೋಗವು ಅತ್ಯಂತ ಪರಿಣಾಮಕಾರಿ ಎಂಬುದರಲ್ಲಿ ಎರಡು ಮಾತಿಲ್ಲ.

ಆತ್ಮೀಯರೇ, ನಮ್ಮೆಲ್ಲರ ಹೆಮ್ಮೆಯ ದೆಹಲಿ ಕರ್ನಾಟಕ ಸಂಘದ ಮುಖವಾಣಿ ಮಾಸಪತ್ರಿಕೆ ಅಭಿಮತದ ಪ್ರಧಾನ ಸಂಪಾದಕರಾಗಿ 2021 ಅಕ್ಟೊಬರ್‌ನಿಂದ ಈವರೆಗೆ ಉತ್ತಮ ಕೆಲಸವನ್ನು ಮಾಡಿ ಅಭಿಮತವನ್ನು ಇನ್ನಷ್ಟು ಬೆಳೆಸಿ ಪ್ರಭುದ್ಧತೆಯನ್ನು ತಂದುಕೊಟ್ಟ ನಮ್ಮ ಆತ್ಮೀಯರಲ್ಲೊಬ್ಬರಾದ ಶ್ರೀ ಎನ್.ಪಿ. ಚಂದ್ರಶೇಖರ ಅವರು ತಮ್ಮ ವೈಯಕ್ತಿಕ ಕಾರಣಗಳಿಂದ ಸಂಪಾದಕ ಮಂಡಳಿಯಿಂದ ಹಿಂದೆ ಸರಿಯುತ್ತಿದ್ದಾರೆ. ಅವರಿಗೆ ಹಾರ್ದಿಕ ಧನ್ಯವಾದಗಳನ್ನು ಅರ್ಪಿಸುತ್ತಾ, ನಮ್ಮ ಅಧ್ಯಕ್ಷರ ಮತ್ತು ಕಾರ್ಯಕಾರಿ ಸಮಿತಿಯ ಆಶಯದಂತೆ ಅಭಿಮತದ ಪ್ರಧಾನ ಸಂಪಾದಕನಾಗಿ ಇನ್ಮುಂದೆ ಮುಂದುವರಿಸುವ ಜವಾಬ್ದಾರಿಯನ್ನು ಅತ್ಯಂತ ವಿನಮ್ರತೆಯಿಂದ ವಹಿಸಿಕೊಳ್ಳುತ್ತಾ, ಈ ಪ್ರಯತ್ನದಲ್ಲಿ ನಿಮ್ಮೆಲ್ಲರ ಸಲಹೆ ಸಹಕಾರಗಳು ಸದಾ ನಮ್ಮೊಂದಿಗಿರಲಿ ಎಂದು ಆಶಿಸುತ್ತೇನೆ. ಅಭಿಮತ ಮಾಸಪತ್ರಿಕೆಯಲ್ಲಿ, ಸಂಘದ ಸ್ಮರಣಸಂಚಿಕೆ ಸಿದ್ದಪಡಿಸುವಲ್ಲಿ ಹಾಗು ಸದ್ಯದಲ್ಲಿ ಹೊರಬರಲಿರುವ ಸಂಘದ ಇತಿಹಾಸ ಪುಸ್ತಕವನ್ನು ಬರೆಯುವಲ್ಲಿ ಶ್ರೀ ಚಂದ್ರಶೇಖರ ಎನ್.ಪಿ. ಅವರ ಕೊಡುಗೆ ಶ್ಲಾಘನೀಯ. 02.10.1990 ರಲ್ಲಿ ಅಭಿಮತವನ್ನು ಹುಟ್ಟು ಹಾಕಿದ ಸಂಘದ ಮಾಜಿ ಅಧ್ಯಕ್ಷರಾದ ದಿ. ಶ್ರೀ ಎನ್.ಪಿ. ಭಟ್ಟರವರಿಗೆ ಮತ್ತು ಕಳೆದ 32–33 ವರ್ಷಗಳಲ್ಲಿ ಅದರ ಪ್ರಧಾನ ಸಂಪಾದಕರಾಗಿ ಕಾರ್ಯ ನಿರ್ವಹಿಸಿ, ಪೋಷಿಸಿ ಬೆಳೆಸಿದ ಡಾ. ವೆಂಕಟಾಚಲ ಜಿ ಹೆಗಡೆ, ಶ್ರೀಮತಿ ಉಷಾ ಭರತಾದ್ರಿ, ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಶ್ರೀ ಡಿ. ಬಾಲಕೃಷ್ಣ ನಾಯ್ಕ್, ಡಾ. ಅವನೀಂದ್ರನಾಥ ರಾವ್, ಶ್ರೀ ಚಂದ್ರಶೇಖರ್ ಎನ್.ಪಿ.ರವರಿಗೆ ಮತ್ತು ಆಯಾ ಕಾಲದ ಸಂಪಾದಕ ಮಂಡಳಿ ಸದಸ್ಯರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತಾ, ಅವರುಗಳು ಹಾಕಿಕೊಟ್ಟ ದಾರಿ, ಮಾರ್ಗದರ್ಶನದಲ್ಲಿ ಮುನ್ನಡೆಯುವ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆಂಬ ಭರವಸೆಯನ್ನು ಅತ್ಯಂತ ಆತ್ಮವಿಶ್ವಾಸದಿಂದ ನಾನು ನೀಡುತ್ತಿದ್ದೇನೆ. ಒಬ್ಬ ಇಂಜಿನಿಯರ್ ಆಗಿದ್ದು, ಸಂಘದ ಕಾರ್ಯಕಾರಿ ಸಮಿತಿಯಲ್ಲಿ, ಅಭಿಮತ ಸಂಪಾದಕ ಮಂಡಳಿಯಲ್ಲಿ ಸದಸ್ಯನಾಗಿ, ಸ್ಮರಣ ಸಂಚಿಕೆ ಪ್ರಧಾನ ಸಂಪಾದಕನಾಗಿ, ಶ್ರದ್ಧೆ ಮತ್ತು ಬದ್ಧತೆಯಿಂದ ಪ್ರಾಮಾಣಿಕವಾಗಿ ಕೆಲಸ ಮಾಡಿರುವ ನನ್ನ ಸಾಮರ್ಥ್ಯದಲ್ಲಿ ನಂಬಿಕೆ ಮತ್ತು ವಿಶ್ವಾಸವನ್ನಿಟ್ಟು ನನಗೆ ಈ ಜವಾಬ್ದಾರಿಯನ್ನು ವಹಿಸಿರುವ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜರವರಿಗೆ ಹಾಗು ಕಾರ್ಯಕಾರಿ ಸಮಿತಿಗೆ ವಂದನೆಗಳು. ನಮ್ಮ ಸಂಘದ ಸದಸ್ಯರ, ದೆಹಲಿ ಕನ್ನಡಿಗರ ಭಾವನೆಗಳಿಗೆ, ಅಶೋತ್ತರಗಳಿಗೆ ಈ ಮೂಲಕ ಪೂರಕವಾಗಿ ಸ್ಪಂದಿಸಲು ನಾನು ಕಟಿಬದ್ಧ.

2022ರ ಏಪ್ರಿಲ್‌ನಿಂದ ನಮ್ಮ ಸಂಘದ ಅಮೃತ ಮಹೋತ್ಸವ ವರ್ಷಾಚರಣೆಯನ್ನು ಅತ್ಯಂತ ವಿಜ್ರಂಭಣೆಯಿಂದ ಮತ್ತು ಸಂಭ್ರಮದಿಂದ ನಾವೆಲ್ಲರೂ ಆಚರಿಸಿದ್ದೇವೆ. ಕಳೆದ ವರ್ಷವಿಡೀ ಹಲವಾರು ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು, ಎಂಟು ಜಿಲ್ಲಾವಾರು ಸಾಂಸ್ಕೃತಿಕ ಉತ್ಸವಗಳು ಸಂಘದ ವೇದಿಕೆಯಲ್ಲಿ ಯಶಸ್ವಿಯಾಗಿ ಆಯೋಜನೆಗೊಂಡಿವೆ. ಅಮೃತ ಮಹೋತ್ಸವ ಸಂಭ್ರಮಾಚರಣೆಯ ಮೇರು ಕಾರ್ಯಕ್ರಮ **'ಬಾರಿಸು ಕನ್ನಡ ಡಿಂಡಿಮವ'** ಅತ್ಯಂತ ವೈಶಿಷ್ಟ ಪೂರ್ಣವಾಗಿ ಕಳೆದ ಫೆಬ್ರವರಿ 25–26ರಂದು ನವದೆಹಲಿಯ ತಾಲ್ಕಟೋರ ಒಳಾಂಗಣ ಕ್ರೀಡಾಂಗಣದಲ್ಲಿ ನಾಡಿನ ಪೂಜ್ಯ ಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ, ದೇಶದ ಪ್ರಧಾನಮಂತ್ರಿಯವರಿಂದ ಉದ್ಘಾಟನೆಗೊಂಡು, ರಾಜ್ಯದ ಮುಖ್ಯಮಂತ್ರಿಗಳು, ಕೇಂದ್ರ ಮತ್ತು ರಾಜ್ಯ ಸಚಿವರು, ಶಾಸಕರು, ಅನೇಕ ಗಣ್ಯಾತಿ ಗಣ್ಯರ ಸಮ್ಮುಖದಲ್ಲಿ ಯಶಸ್ವಿಯಾಗಿ ಜರುಗಿದೆ. ನಾವೆಲ್ಲರೂ ಇದಕ್ಕೆ ಸಾಕ್ಷಿಯಾಗಿದ್ದೇವೆ. ಸಂಘದ ಅಮೃತಕಾಲದ ಅಮೃತ ಕ್ಷಣಗಳನ್ನು ದಾಖಲಿಸುತ್ತಾ,ಸಂಘದ ಕಾರ್ಯ ಚಟುವಟಿಕೆಗಳ ಸಮಗ್ರ ವಿವರಗಳ ಪಕ್ಷಿನೋಟವನ್ನೊಳಗೊಂಡ, ಅಮೃತ ಮಹೋತ್ಸವದ ನೆನಪಿಗಾಗಿ ಹೊರತಂದ **ಸ್ಮರಣ ಸಂಚಿಕೆ**ಯನ್ನು ಕಳೆದ ಜೂನ್ 4, 2023ರಂದು ಬೆಂಗಳೂರಿನ ಪ್ರತಿಷ್ಠಿತ ರವೀಂದ್ರ ಕಲಾಕ್ಷೇತ್ರ ಸಭಾಂಗಣದಲ್ಲಿ ವಿಶೇಷವಾಗಿ ಬಿಡುಗಡೆ ಮಾಡಲಾಗಿದೆ. ಈ ಸ್ಮರಣ ಸಂಚಿಕೆಯು ಎಲ್ಲರ ಮೆಚ್ಚುಗೆ ಪಡೆದಿರುವುದು ಅದರ ಪ್ರಧಾನ ಸಂಪಾದಕನಾಗಿ ಕಾರ್ಯನಿರ್ವಹಿಸಿದ ನನಗೆ ಧನ್ಯತಾಭಾವ ಮೂಡಿಸಿದೆ, ಇದಕ್ಕೆ ಸಂಘದ ಅಧ್ಯಕ್ಷರು, ಕಾರ್ಯಕಾರಿ ಸಮಿತಿ, ಸ್ಮರಣಸಂಚಿಕೆ ಸಮಿತಿ ಸದಸ್ಯರಿಗೆ ನಾನು ಆಭಾರಿ.

ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮವು ದೆಹಲಿಯಿಂದ ಹೊರಗಡೆ ಸಂಘವು ಆಯೋಜಿಸಿದ ಶ್ರೇಷ್ಠ ಕಾರ್ಯಕ್ರಮಗಳಲ್ಲೊಂದಾಗಿದೆ. ಅಲ್ಲಿ ಪ್ರಸ್ತುತಿಗೊಂಡ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಬೆಂಗಳೂರಿನಲ್ಲಿರುವ ನಮ್ಮ ಸದಸ್ಯರುಗಳ ಮತ್ತು ನೆರೆದಿದ್ದ ಸಾವಿರಕ್ಕೂ ಹೆಚ್ಚು ನಾಡಿನ ಕನ್ನಡಾಭಿಮಾನಿಗಳ ಪ್ರಶಂಸೆಗೆ ಪಾತ್ರವಾಗಿವೆ. ಹಾಗೇನೆ, ಕರ್ನಾಟಕದ ವಿಧಾನಸಭೆಗೆ ಚುನಾವಣೆ ನಡೆದು, ಮಾನ್ಯ ಮುಖ್ಯಮಂತ್ರಿಗಳು ಶ್ರೀ ಸಿದ್ಧರಾಮಯ್ಯ ಮತ್ತು ಮಾನ್ಯ ಉಪಮುಖ್ಯಮಂತ್ರಿಗಳು ಶ್ರೀ ಡಿ.ಕೆ. ಶಿವಕುಮಾರ್‌ರವರ ನೇತೃತ್ವದಲ್ಲಿ ಹೊಸ ಸಚಿವ ಸಂಪುಟ ಅಧಿಕಾರ ವಹಿಸಿಕೊಂಡು ಕಾರ್ಯಪ್ರವೃಕ್ತವಾಗಿದೆ. ಅವರಿಗೆ ಸಮಸ್ತ ದೆಹಲಿ ಮತ್ತು ಎನ್‌ಸಿಆರ್ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು. ಸ್ಮರಣ ಸಂಚಿಕೆ ಬಿಡುಗಡೆ ಕಾರ್ಯಕ್ರಮದ ವಿಸ್ತೃತ ವರದಿ, ದೃಶ್ಯ ಸಂಭ್ರಮ, ನಾಡಪ್ರಭು ಕೆಂಪೇಗೌಡರ ಕುರಿತು ಲೇಖನ, ಅಗಲಿದ ಶ್ರೀಮತಿ ನೇತ್ರಾವತಿ ಮಯ್ಯರವರಿಗೆ ನೀಡಿದ ಗೀತನಮನ ಶ್ರದ್ಧಾಂಜಲಿ, ಇತರ ಸ್ಥಳೀಯ ಸಂಸ್ಥೆಗಳ ಮತ್ತಿತರ ಕಾರ್ಯಕ್ರಮಗಳ ವರದಿ, ಮಾಹಿತಿಗಳನ್ನೊಳಗೊಂಡ ಅಭಿಮತದ ಈ ಅಂಕಣವನ್ನು ನಿಮ್ಮ ಕೈಯಲ್ಲಿಡಲು ನನಗೆ ಅತೀವ ಸಂತೋಷವಾಗುತ್ತಿದೆ. ನಿಮ್ಮ ಅನಿಸಿಕೆಗಳನ್ನು, ಸುಧಾರಣಾಯೋಗ್ಯ ಪ್ರತಿಕ್ರಿಯೆಗಳನ್ನು ತಿಳಿಸಬೇಕಾಗಿ ವಿನಂತಿಸುತ್ತೇನೆ.

ಧನ್ಯವಾದಗಳೊಂದಿಗೆ,




*ಕೆ. ಶ್ರೀನಿವಾಸ ಮೂರ್ತಿ*
*ಪ್ರಧಾನ ಸಂಪಾದಕರು*

# ಅಧ್ಯಕ್ಷರ ನುಡಿ



ಆತ್ಮೀಯ ಕನ್ನಡ ಬಂಧುಗಳೇ,

ಜೂನ್ ತಿಂಗಳಲ್ಲಿ ದೆಹಲಿ ಕರ್ನಾಟಕ ಸಂಘದ ಎಲ್ಲಾ ಚಟುವಟಿಕೆಗಳು ಗಣನೀಯವಾಗಿ ಕಡಿಮೆಯಾಗಿದ್ದವು. ಬೇಸಿಗೆ ರಜೆ ದಿನಗಳಲ್ಲಿ ಸಾಮಾನ್ಯವಾಗಿ ಹೆಚ್ಚಿನ ಕನ್ನಡಿಗರು ತಾಯಿನಾಡು ಕರ್ನಾಟಕಕ್ಕೆ ಹೋಗಿದ್ದರಿಂದ ಮತ್ತು ಅತಿ ಹೆಚ್ಚು ಉಷ್ಣಾಂಶ ಇದ್ದ ಕಾರಣ ಕಾರ್ಯಕ್ರಮಗಳ ಸಂಖ್ಯೆ ಸ್ವಲ್ಪ ಮಟ್ಟಿಗೆ ಕಡಿಮೆ ಆಗಿತ್ತು. ಅದರೂ ಸಹ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸಂದರ್ಭದಲ್ಲಿ ಅಮೃತ ಮಹೋತ್ಸವ ಸಂಭ್ರಮಾಚರಣೆ ನೆನಪಿಗಾಗಿ ಹೊರ ತರಲಾದ **"ಬಾರಿಸು ಕನ್ನಡ ಡಿಂಡಿಮವ"** ಸ್ಮರಣ ಸಂಚಿಕೆಯ ಬಿಡುಗಡೆ ಕಾರ್ಯಕ್ರಮವನ್ನು ನಾವು ಕರ್ನಾಟಕದಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದೆವು. ಈ ಕಾರ್ಯಕ್ರಮಕ್ಕೆ ಪರಮಪೂಜ್ಯರೊಂದಿಗೆ ಕರ್ನಾಟಕ ಸರ್ಕಾರದ ಮಂತ್ರಿಗಳು ಮತ್ತು ಅನೇಕ ಶಾಸಕರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಹಾಗು ಅನೇಕ ಕನ್ನಡ ಪ್ರೇಮಿಗಳು, ಕಲಾವಿದರು, ಬೆಂಗಳೂರಿನಲ್ಲಿದ್ದ ನಮ್ಮ ಸಂಘದ ಹಲವು ಸದಸ್ಯರು ಎಲ್ಲರೂ ಸಹ ಭಾಗಿಯಾಗಿದ್ದರು. ರವೀಂದ್ರ ಕಲಾಕ್ಷೇತ್ರದ ಸಭಾಂಗಣದಲ್ಲಿ ಕೇವಲ 830 ಆಸನಗಳಿದ್ದರೂ ಸಭಾಂಗಣ ತುಂಬಿ ತುಳುಕಿ ಸುಮಾರು 300ಕ್ಕೂ ಹೆಚ್ಚು ಕಲಾವಿದರು, ಕನ್ನಡ ಪ್ರೇಮಿಗಳು ನಿಂತು ಕಾರ್ಯಕ್ರಮವನ್ನು ವೀಕ್ಷಿಸಿದರು. ಈ ವಿಶೇಷ ಸಮಾರಂಭಕ್ಕೆ ಬಂದು ಕಾರ್ಯಕ್ರಮವನ್ನು ಯಶಸ್ವಿ ಮಾಡಿಕೊಟ್ಟ ತಮಗೆಲ್ಲರಿಗೂ ಅನಂತ ಅನಂತ ಧನ್ಯವಾದಗಳು.

ಸಮಾರಂಭದಲ್ಲಿ ವಿಶೇಷವಾಗಿ ರಾಜ್ಯದ ಕೃಷಿ ಮಂತ್ರಿಗಳಾದ ಶ್ರೀ ಚೆಲುವರಾಯಸ್ವಾಮಿ ಮತ್ತು ಕಂದಾಯ ಸಚಿವರಾದ ಶ್ರೀ ಕೃಷ್ಣ ಬೈರೇಗೌಡ ಇವರೆಲ್ಲರ ಉಪಸ್ಥಿತಿ ಕಾರ್ಯಕ್ರಮದ ಘನತೆಯನ್ನು ಹೆಚ್ಚಿಸಿತ್ತು. ಅವರುಗಳು ಮಾತನಾಡಿ,ದೆಹಲಿ ಕರ್ನಾಟಕ ಸಂಘದ ಕಾರ್ಯ ಶೈಲಿಯನ್ನು ಹಾಡಿ ಹೊಗಳಿದರಲ್ಲದೇ, ಸಂಘ ಕೈಗೊಳ್ಳುತ್ತಿರುವ ವಿವಿಧ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದರು. ಕಾರ್ಯಕ್ರಮಕ್ಕೆ ರಾಜ್ಯದ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳೂ ಸಹ ಬರಬೇಕಾಗಿತ್ತು. ಆದರೆ ಕಾರಣಾಂತರಗಳಿಂದ ಅವರುಗಳು ಭಾಗವಹಿಸಲು ಸಾಧ್ಯವಾಗಲಿಲ್ಲ. ಪರಮ ಪೂಜ್ಯ ಶ್ರೀ ನಂಜಾವಧೂತ ಮಹಾಸ್ವಾಮೀಜಿಗಳು, ಸ್ಮರಣಸಂಚಿಕೆ ಬಿಡುಗಡೆ ಸಮಾರಂಭದಲ್ಲಿ ದಿವ್ಯ ಸಾನಿಧ್ಯ ವಹಿಸಿ, ಆಶೀರ್ವಚನ ನೀಡಿದರು. ಕರ್ನಾಟಕದ ನಾನಾ ಕಲಾತಂಡಗಳ ಕಲಾವಿದರಿಂದ ವೈವಿದ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರಸ್ತುತಿಗೊಂಡು ನಮ್ಮ ಈ ಕಾರ್ಯಕ್ರಮ ಅಭೂತಪೂರ್ವ ಯಶಸ್ವಿಯಾಗಿದೆ.

ಇತ್ತೀಚೆಗೆ, ದೆಹಲಿಗೆ ಆಗಮಿಸಿದ್ದ ಸಂಧರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರನ್ನು ಭೇಟಿ ಮಾಡಿ ಕರ್ನಾಟಕ ಸಂಘದ ಕಾರ್ಯ ಚಟುವಟಿಕೆಗಳ ಬಗ್ಗೆ ಅವರಿಗೆ ತಿಳಿಸಲಾಯಿತು. ಜೊತೆಗೆ ಹೊಸದಾಗಿ ಆಯ್ಕೆಯಾಗಿ ಬಂದಂತ ಮಾನ್ಯ ಮುಖ್ಯಮಂತ್ರಿಗಳಿಗೆ, ಉಪ ಮುಖ್ಯಮಂತ್ರಿಗಳಿಗೆ ಮತ್ತು ಅವರ ಸಚಿವ ಸಂಪುಟಕ್ಕೆ ಶುಭಾಶಯಗಳನ್ನು ಸಂಘದ ಕಾರ್ಯ ಕಾರಿ ಸಮಿತಿ ಮತ್ತು ಸದಸ್ಯರ ಪರವಾಗಿ ತಿಳಿಸಲಾಯಿತು. ಮಾನ್ಯ ಮುಖ್ಯಮಂತ್ರಿಗಳು ಹರ್ಷವನ್ನು ವ್ಯಕ್ತ ಪಡಿಸಿ ಮುಂದಿನ ದಿನಗಳಲ್ಲಿ ಸಂಘದ ಯಾವುದಾದರೂ ಒಂದು ಕಾರ್ಯಕ್ರಮದಲ್ಲಿ ಬಂದು ಭಾಗಿಯಾಗುತ್ತೇನೆ ಎಂದು ಭರವಸೆ ನೀಡಿದರು. ಹೊಸದಾಗಿ ಅಧಿಕಾರ ಸ್ವೀಕರಿಸಿ ಕಾರ್ಯ ಪ್ರವೃತ್ತವಾಗಿರುವ ನೂತನ ಸರ್ಕಾರಕ್ಕೆ ಹಾರ್ದಿಕ ಅಭಿನಂದನೆಗಳನ್ನು ತಿಳಿಸುತ್ತಾ ರಾಜ್ಯದ ಜನತೆಯ, ಹೊರನಾಡ ಕನ್ನಡಿಗರ ಆಶೋತ್ತರಗಳಿಗೆ ಸ್ಪಂದಿಸಲೆಂದು ಆಶಿಸುತ್ತೇನೆ.

ಬಂಧುಗಳೇ, ಜುಲೈ ತಿಂಗಳಿಂದ ಕಾರ್ಯಕ್ರಮಗಳು ನಮ್ಮ ಸಂಘದಲ್ಲಿ ಮತ್ತೆ ಶುರುವಾಗಿವೆ. ಜುಲೈ 2ರಂದು ನಡೆದ ಕಾರ್ಯಕ್ರಮದಲ್ಲಿ ಉನ್ನತ ಶಿಕ್ಷಣದ ಬಗ್ಗೆ, ಮುಂದೆ ಬರುವ ಕೋರ್ಸ್‌ಗಳ ಕುರಿತು ದೆಹಲಿ ಕನ್ನಡಿಗರ ಮಕ್ಕಳಿಗೆ ಹಾಗು ಪೋಷಕರಿಗೆ ಮಾಹಿತಿ ಮತ್ತು ಮಾರ್ಗದರ್ಶನ ನೀಡಲಾಯಿತು. ಕೇಂದ್ರ ಸರ್ಕಾರದ ವಿವಿಧ ಇಲಾಖೆಯ ಹಿರಿಯ ಅಧಿಕಾರಿಗಳು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಭಾಗಿಯಾದ ಶ್ರೀ ಎನ್. ರಾಜಶೇಖರ್ ಐಪಿಎಸ್ ಮತ್ತು ಶ್ರೀ ಡಿ.ಸಿ. ಮಂಜುನಾಥ್, ಐಎಫ್‌ಎಸ್ ಹಾಗು ಇನ್ನು ಅನೇಕ ನಮ್ಮ ಕನ್ನಡಿಗ ಅಧಿಕಾರಿಗಳು, ಶಿಕ್ಷಕ ತಜ್ಞರು, ವಿಜ್ಞಾನಿಗಳು, ವೈದ್ಯರು ಕಾರ್ಯಕ್ರಮವನ್ನು ಯಶಸ್ವಿ ಮಾಡಿದ್ದಾರೆ. ನಮ್ಮ ಮಕ್ಕಳಿಗೆ ಮತ್ತು ಪೋಷಕರಿಗೆ ಹೆಚ್ಚಿನ ಮಾಹಿತಿಯನ್ನು, ಜವಾಬ್ದಾರಿಗಳನ್ನು ತಿಳಿಸಿಕೊಟ್ಟಿದ್ದಾರೆ. ಭಾಗವಹಿಸಿದ ಎಲ್ಲಾ ಅಧಿಕಾರಿವಗಕ್ಕೆ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾದ ದೆಹಲಿ ಕನ್ನಡಿಗರಿಗೆ ನನ್ನ ಧನ್ಯವಾದಗಳು. ಜೊತೆಗೆ, ಇದೇ ಜುಲೈ ತಿಂಗಳಿನಲ್ಲಿ ನಮ್ಮ ಸದಸ್ಯರುಗಳಿಗೆ ತಜ್ಞ ವೈದ್ಯರೊಂದಿಗೆ ಆರೋಗ್ಯ ತಪಾಸಣೆ, ಪರಾಮರ್ಶೆಗಳನ್ನೊಳಗೊಂಡ **'ಆರೋಗ್ಯ ಮೇಳ'**ವನ್ನು ಸಂಘದಲ್ಲಿ ಆಯೋಜಿಸಲಾಗುತ್ತಿದೆ. ಕಳೆದ ಬಾರಿ ಈ ಕಾರ್ಯಕ್ರಮ ತುಂಬಾ ಯಶಸ್ವಿಗೊಂಡಿತ್ತು. ಈ ಬಾರಿಯೂ ಸಹ ಅದೇ ರೀತಿಯಲ್ಲಿ ಇನ್ನೂ ಅನೇಕ ವೈದ್ಯರ ಜೊತೆಗೆ ಆರೋಗ್ಯ ಮೇಳವನ್ನು ಮತ್ತು ರಕ್ತದಾನ ಶಿಬಿರವನ್ನು ಜುಲೈ 23ರಂದು ಭಾನುವಾರ ಬೆಳಗ್ಗೆ 8.00 ಗಂಟೆಯಿಂದ ಹಮ್ಮಿಕೊಂಡಿದ್ದೇವೆ. ಈ ಕಾರ್ಯಕ್ರಮದ ಪ್ರಯೋಜನವನ್ನು ಎಲ್ಲ ದೆಹಲಿ ಕರ್ನಾಟಕ ಸಂಘದ ಸದಸ್ಯರು ಮತ್ತು ದೆಹಲಿ ಕನ್ನಡಿಗರು ಪಡೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಬರುವ ಜುಲೈ 30ನೇ ತಾರೀಕು ನಮ್ಮ ದೆಹಲಿ ಕರ್ನಾಟಕದ ಸಂಘದ ಹಿರಿಯ ಸದಸ್ಯರೊಂದಿಗೆ ಸಂವಾದದ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರಸ್ತುತವಾಗಲಿವೆ. ಸಂಘದ ವೇದಿಕೆಯಲ್ಲಿ ಕರ್ನಾಟಕದಿಂದ ಬರುತ್ತಿರುವ ಸುಮಾರು 30 ನುರಿತ ಕಲಾವಿದೆಯರು 40 ವಚನಗಳಿಗೆ ನೃತ್ಯರೂಪಕವನ್ನು ಪ್ರದರ್ಶಿಸಲಿದ್ದು, ಅಪರೂಪದ ಈ ಕಾರ್ಯಕ್ರಮದಲ್ಲಿ ನೀವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಬೇಕೆಂದು ವಿನಂತಿಸುತ್ತಿದ್ದೇನೆ.

ಬಂಧುಗಳೇ, ಇನ್ನೂ ಅನೇಕ ಸಂಘದ ಕಾರ್ಯಕ್ರಮಗಳು ತಮ್ಮ ಮುಂದೆ ಬರಲಿವೆ. ವಿಶೇಷವಾಗಿ ದೆಹಲಿಯಲ್ಲಿ ಅನೇಕ ಕನ್ನಡಪರ ಸಂಘ ಸಂಸ್ಥೆಗಳು ಮಾತ್ರ ಸಂಸ್ಥೆ ದೆಹಲಿ ಕರ್ನಾಟಕ ಸಂಘದ ಜೊತೆ ಜೊತೆಯಲ್ಲಿ ಕನ್ನಡ ಸೇವೆಯನ್ನು ಸಲ್ಲಿಸುತ್ತಿವೆ. ಇಂತಹ ನೋಂದಾಯಿತ ಸಂಸ್ಥೆಗಳೊಂದಿಗೆ ಜೊತೆಗೂಡಿ ದೆಹಲಿ ಕರ್ನಾಟಕ ಸಂಘದಲ್ಲಿ ಒಂದು ಕಾರ್ಯಕ್ರಮವನ್ನು ಬರುವ ದಿನಗಳಲ್ಲಿ ಹಮ್ಮಿಕೊಳ್ಳುತ್ತಿದ್ದೇವೆ. ಸ್ಥಳೀಯ ಸಂಘ ಸಂಸ್ಥೆಗಳಿಗೆ ಸಹಕಾರ ನೀಡುವ ಜೊತೆಗೆ ಸ್ಥಳೀಯ ಕಲಾವಿದರಿಗೆ ಹೆಚ್ಚಿನ ಆದ್ಯತೆಯನ್ನು ನೀಡಬೇಕೆಂಬುದೇ ಈ ಕಾರ್ಯಕ್ರಮದ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಜೂನ್ 25 ರಂದು ಕರೆದಿದ್ದ ಸಭೆಯಲ್ಲಿ ದೆಹಲಿಯ 22 ಸ್ಥಳೀಯ ಕನ್ನಡ ಸಂಘ ಸಂಸ್ಥೆಗಳು ಭಾಗಿಯಾಗಿ ಸಂಘದ ವೇದಿಕೆಯಲ್ಲಿ ಕಾರ್ಯಕ್ರಮವನ್ನು ನೀಡಲು ಒಪ್ಪಿಗೆ ನೀಡಿದ್ದಾರೆ. ದೆಹಲಿ ಕರ್ನಾಟಕ ಸಂಘವು ಸಹ ಅವರಿಗೆ ಧನ ಸಹಾಯದ ರೂಪದಲ್ಲಿ ಸಹಕಾರವನ್ನು ನೀಡಲಿದೆ. ಈ ಕಾರ್ಯಕ್ರಮ ಆಗಸ್ಟ್ 26 ಮತ್ತು 27ರಂದು ಎರಡು ದಿನಗಳು ನಡೆಯಲಿದ್ದು, ಕರ್ನಾಟಕದಿಂದ ಬಂದು ನೆಲಸಿ ದೆಹಲಿಯಲ್ಲಿ ಕನ್ನಡ ಸೇವೆ ಮಾಡುತ್ತಿರುವ ನಮ್ಮ ಹೊರನಾಡ ಕನ್ನಡಿಗರೆಲ್ಲರೂ ಭಾಗಿಯಾಗಬೇಕೆಂದು ಪ್ರಾರ್ಥಿಸುತ್ತೇನೆ.

ಈ ಅಮೃತ ಮಹೋತ್ಸವದಲ್ಲಿ ಹಲವಾರು ವೈವಿದ್ಯಮಯ, ವಿನೂತನ ಕಾರ್ಯಕ್ರಮಗಳನ್ನು ನೀಡಿದ್ದೇವೆ. ನಿರಂತರ ಕಾರ್ಯಕ್ರಮಗಳ ಜೊತೆಗೆ ಸದಸ್ಯರುಗಳಿಗೆ ಅನುಕೂಲವಾಗುವಂತಹ ಕಾರ್ಯಗಳು ಸಹ ಅಮೃತ ಮಹೋತ್ಸವದ ಸಂದರ್ಭದಲ್ಲಿ ನಡೆಯುತ್ತಿವೆ. ಈಗ ಮತ್ತೊಂದು ವಿಶೇಷ ಕಾರ್ಯವನ್ನು ದೆಹಲಿ ಕರ್ನಾಟಕ ಸಂಘ ಕೈಗೊತ್ತಿಕೊಂಡಿದೆ. ಅದರಲ್ಲಿ ಮುಖ್ಯವಾಗಿ ಅನ್ನ ದಾಸೋಹ ಕಾರ್ಯಕ್ರಮ. ಆಗಸ್ಟ್ 27ರಂದು ಕರ್ನಾಟಕ ರಾಜ್ಯದ ಮಂತ್ರಿಗಳು ಮತ್ತು ಪರಮಪೂಜ್ಯರ ಜೊತೆಗೂಡಿ ಈ ದಾಸೋಹ ಕಾರ್ಯಕ್ರಮವು ಉದ್ಘಾಟನೆಯಾಗಲಿದೆ. ಇದು ದೆಹಲಿಯಲ್ಲಿ, ನಮ್ಮ ಸಂಘದಲ್ಲಿ ಮೊದಲ ಬಾರಿಗೆ ಆರಂಭಿಸುತ್ತಿರುವ ವಿಶೇಷ ಅಭಿಯಾನ. ಪ್ರತಿ ನಿತ್ಯ ಮಧ್ಯಾಹ್ನದ ಸಮಯದಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ಉಚಿತವಾಗಿ ನಡೆಯಲಿರುವ ಈ ದಾಸೋಹ ಕಾರ್ಯಕ್ರಮವು ನಿರಂತರವಾಗಿ ಮುಂದೆ ಇನ್ನೂ ಅನೇಕ ವರ್ಷಗಳು ನಡೆಯಲಿ ಎಂದು ಆಶಿಸುತ್ತೇನೆ.

ಆತ್ಮೀಯರೇ, ಈ ಎಲ್ಲದರ ಜೊತೆಗೆ ದೆಹಲಿ ಕರ್ನಾಟಕ ಸಂಘವು ಅಮೃತ ಮಹೋತ್ಸವ ಸಂಭ್ರಮಾಚರಣೆಯಲ್ಲಿ ಸುಮಾರು 2500ಕ್ಕೂ ಹೆಚ್ಚು ಕಲಾವಿದರನ್ನು ಕರೆಸಿ ದೆಹಲಿ ಕರ್ನಾಟಕ ಸಂಘದಲ್ಲಿ ಕಲಾಪ್ರದರ್ಶನ ನೀಡಲು ವೇದಿಕೆ ಕಲ್ಪಿಸಿಕೊಟ್ಟಿದೆ. ಅನೇಕ ಗಣ್ಯಾತಿ ಗಣ್ಯರ ಸಮ್ಮುಖದಲ್ಲಿ ಕಾರ್ಯಕ್ರಮ ನೀಡಿದ ಕಲಾವಿದರಿಗೆ, ಕಲಾಪೋಷಕರಿಗೆ ಅಭಿನಂದನೆಯನ್ನು ಸಹ ಸಲ್ಲಿಸಿದೆ. ದೆಹಲಿ ಕರ್ನಾಟಕ ಸಂಘದಿಂದ ಅಯೋಜನೆಗೊಂಡ ಈ ಎಲ್ಲಾ ಕಾರ್ಯಕ್ರಮಗಳಿಗೆ ಸಂಘದ ಖಜಾನೆಯಿಂದ ಒಂದು ರೂಪಾಯಿಯನ್ನೂ ಸಹ ತೆಗೆದು ಉಪಯೋಗಿಸದೇ, ಎಲ್ಲವನ್ನು ಸಹ ದೇಣಿಗೆ ರೂಪದಲ್ಲಿ ತಂದು ಆಯೋಜಿಸಿದ್ದೇವೆ. ಈ ಅಮೃತ ಮಹೋತ್ಸವ ವರ್ಷದಲ್ಲಿ ಸುಮಾರು ಮೂರು ಕೋಟಿ 80 ಲಕ್ಷ ರೂಪಾಯಿಗಳನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಬಂದ ಅನುದಾನ ಮತ್ತು ಸ್ಮರಣ ಸಂಚಿಕೆಗೆ ಬಂದ ಜಾಹೀರಾತುಗಳ ಮೂಲಕ ಧನ ಸಂಗ್ರಹಣೆ ಮಾಡಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಮಾಡಿದ್ದೇವೆ. ಜೊತೆಗೆ ಉಳಿಸಿದ ಒಂದು ಕೋಟಿ ರೂಪಾಯಿಗಳನ್ನು ನಾವು ಎಫ್.ಡಿ. ಸಹ ಮಾಡಿದ್ದೇವೆ. ನಮ್ಮ ಸಂಘವು ಹಿಂದೆಂದಿಗಿಂತಲೂ ಸದಸ್ಯರಿಗೆ ಹೆಚ್ಚು ಕಾರ್ಯಕ್ರಮಗಳನ್ನು ನೀಡುತ್ತಿರುವುದಲ್ಲದೇ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಸದೃಢವಾಗಿದೆ ಮತ್ತು ಆರ್ಥಿಕವಾಗಿ ಅತ್ಯುತ್ತಮ ಸ್ಥಿತಿಯಲ್ಲಿದೆ ಎಂದು ಹೆಮ್ಮೆಯಿಂದ ಹೇಳಲು ನನಗೆ ಅತ್ಯಂತ ಸಂತೋಷವಾಗುತ್ತಿದೆ.

ಬಂಧುಗಳೇ, ನನ್ನ ಕನಸಾದ ನಮ್ಮ ದೆಹಲಿ ಕರ್ನಾಟಕ ಸಂಘದ ಮತ್ತೊಂದು ಯೋಜನೆಯನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಆದಷ್ಟು ಬೇಗನೆ ದೆಹಲಿ ಕರ್ನಾಟಕ ಸಂಘವು ಈಗಿರುವ ಸಂಘದ ಜಾಗದಂತೆಯೇ ಇನ್ನೊಂದು ಜಾಗವನ್ನು ತೆಗೆದುಕೊಂಡು ವಸತಿ ಶಾಲೆ ಮತ್ತು ಅನೇಕ ಸಾಂಸ್ಕೃತಿಕ ಕಾರ್ಯ ಚಟುವಟಿಕೆಗಳ ಮಲ್ಟಿ ಪರ್ಪಸ್ ಸಮುಚ್ಚಯವನ್ನ ಹೊಂದಬೇಕೆಂಬ ನಮ್ಮ ಅಭಿಲಾಷೆ ಇದೆ. ತಾವುಗಳೆಲ್ಲ ಈ ಕಾರ್ಯದಲ್ಲಿ ಕೈ ಜೋಡಿಸುತ್ತೀರಿ ಎಂದುಕೊಂಡಿದ್ದೇನೆ. ದೆಹಲಿ ಕರ್ನಾಟಕ ಸಂಘಕ್ಕೆ ಮತ್ತೊಂದು ಜಾಗವನ್ನು ತೆಗೆದುಕೊಳ್ಳುವ ವಿಷಯದಲ್ಲಿ ಈಗಾಗಲೇ ಉತ್ತರ ಪ್ರದೇಶದ ಮುಖ್ಯಮಂತ್ರಿಗಳ ಜೊತೆ ಮಾತುಕತೆ ನಡೆಯುತ್ತಿದೆ ಹಾಗು ಸದ್ಯದಲ್ಲೇ ತಮಗೆ ಈ ಬಗ್ಗೆ ಸಿಹಿ ಸುದ್ದಿಯನ್ನ ತಿಳಿಸಲ್ಲಿದ್ದೇವೆ.  ಶುಭಾಶಯಗಳೊಂದಿಗೆ,

**ಸಿ.ಎಂ. ನಾಗರಾಜ**

ಅಧ್ಯಕ್ಷರು

## ಮುನ್ನೋಟ

ಆತ್ಮೀಯರೇ,

ಉತ್ತರ ಭಾರತದಲ್ಲಿ ವರುಣನ ಅರ್ಭಟ ಜೋರಾಗಿದೆ. ಉತ್ತರ ಭಾರತದ ಪ್ರವಾಸಿ ತಾಣಗಳು ಹಾಗೂ ತೀರ್ಥಕ್ಷೇತ್ರಗಳ ದರ್ಶನಕ್ಕೆ ಬಂದು ಸಿಲುಕಿರುವ ಭಕ್ತರ ರಕ್ಷಣೆಗಾಗಿ ಕರ್ನಾಟಕ ಸರ್ಕಾರ ಹರ ಸಾಹಸ ಪಡುತ್ತಿದೆ. ಅದೇ ರೀತಿ ದೆಹಲಿಯಲ್ಲಿಯೂ ಮಳೆ ವಿಪರೀತ ಬಂದಿದೆ. ಯಮುನಾ ನದಿಯು ಉಕ್ಕಿ ಹರಿಯುತ್ತಿದೆ. ಶಾಲಾ ಕಾಲೇಜುಗಳು ಆರಂಭಗೊಂಡಿವೆ. ಅದರಂತೆ ಸಂಘದ ಕಾರ್ಯ ಚಟುವಟಿಕೆಗಳು ಪುನರಾರಂಭಗೊಂಡಿವೆ. ಜುಲೈ ತಿಂಗಳಲ್ಲಿ ಆರೋಗ್ಯ ಮೇಳ, ಬಸವಣ್ಣನ ವಚನಗಳಿಗೆ ನೃತ್ಯರೂಪಕ, ಆಗಸ್ಟ್‌ನಲ್ಲಿ ಯಕ್ಷಗಾನ ಹಾಗೂ ದೆಹಲಿಯ ಸ್ಥಳೀಯ ಸಂಘ ಸಂಸ್ಥೆಗಳ ಸದಸ್ಯರಿಂದ ಎರಡು ದಿನಗಳ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ.

ತಾವುಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

***ಆರ್. ರೇಣುಕುಮಾರ್***
ಪ್ರಧಾನ ಕಾರ್ಯದರ್ಶಿ

## ದೆಹಲಿ ಕರ್ನಾಟಕ ಸಂಘದ ಮುಂಬರುವ ಕಾರ್ಯಕ್ರಮಗಳು

**16 ಜುಲೈ 2023** **ಭಾನುವಾರ**
**ಬೆಳಿಗ್ಗೆ : 9.00 ಗಂಟೆಗೆ**

ದೆಹಲಿ ಕರ್ನಾಟಕ ಸಂಘ ಮತ್ತು ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು, ದೆಹಲಿ ಪ್ರದೇಶ ಘಟಕದ ಸಂಯುಕ್ತ ಆಶ್ರಯದಲ್ಲಿ ಮಕ್ಕಳಿಗಾಗಿ **"ಕಾರ್ಯಾಗಾರ"**

**23 ಜುಲೈ 2023** **ಭಾನುವಾರ ಬೆಳಿಗ್ಗೆ 8.00 ರಿಂದ ಮಧ್ಯಾಹ್ನ 1.00**



**"ಆರೋಗ್ಯ ಮೇಳ"ವನ್ನು ಸಂಘದ ಆವರಣದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ. ದೆಹಲಿ ಕನ್ನಡಿಗರು ಇದರ ಲಾಭವನ್ನು ಪಡೆದುಕೊಳ್ಳಬೇಕಾಗಿ ವಿನಂತಿ.**

**30 ಜುಲೈ 2023** **ಭಾನುವಾರ**
**ಸಂಜೆ : 4.00 ಗಂಟೆಗೆ**

ದೆಹಲಿ ಕರ್ನಾಟಕ ಸಂಘದ ಹಿರಿಯರೊಂದಿಗೆ **ಸಂವಾದ** ಮತ್ತು ಸಾಣೇಹಳ್ಳಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಇವರ ಮಾರ್ಗದರ್ಶನದಲ್ಲಿ **"ತುಮ್ಹಾರೆ ಸಿವಾ ಕೋಯಿ ನಹೀ"** ಬಸವಣ್ಣನ ವಚನಗಳಿಗೆ ನೃತ್ಯರೂಪಕ

**15 ಆಗಸ್ಟ್ 2023** **ಮಂಗಳವಾರ**
**ಬೆಳಿಗ್ಗೆ 8.30 ಗಂಟೆಗೆ**

ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ **"ಧ್ವಜಾರೋಹಣ"**

**19 ಆಗಸ್ಟ್ 2023** **ಶನಿವಾರ**
**ರಾತ್ರಿ 9.00 ಗಂಟೆಯಿಂದ**

**"ಅಹೋರಾತ್ರಿ ಯಕ್ಷಗಾನ"**

**26 ಆಗಸ್ಟ್ 2023** **ಶನಿವಾರ**

ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಅಂಗವಾಗಿ ಸ್ಥಳೀಯ ಕನ್ನಡಪರ ಸಂಘ ಸಂಸ್ಥೆಗಳಿಂದ ವಿವಿಧ **ಸಾಂಸ್ಕೃತಿಕ ಕಾರ್ಯಕ್ರಮಗಳು**

**27 ಆಗಸ್ಟ್ 2023** **ಭಾನುವಾರ**

ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಅಂಗವಾಗಿ ಸ್ಥಳೀಯ ಕನ್ನಡಪರ ಸಂಘ ಸಂಸ್ಥೆಗಳಿಂದ ವಿವಿಧ **ಸಾಂಸ್ಕೃತಿಕ ಕಾರ್ಯಕ್ರಮಗಳು**

**27 ಆಗಸ್ಟ್ 2023** **ಭಾನುವಾರ**

ದೆಹಲಿ ಕರ್ನಾಟಕ ಸಂಘದಲ್ಲಿ **"ದಾಸೋಹ"** ಕಾರ್ಯಕ್ರಮ ಉದ್ಘಾಟನೆ

## ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಅದ್ದೂರಿಯಾಗಿ ಮೂಡಿಬಂದ

# ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸ್ಮರಣ ಸಂಚಿಕೆ ಬಿಡುಗಡೆ ಸಮಾರಂಭ



ರಾಷ್ಟ್ರ ರಾಜಧಾನಿಯಲ್ಲಿ ದೆಹಲಿ ಕರ್ನಾಟಕ ಸಂಘವು 1948ರಲ್ಲಿ ಸ್ಥಾಪನೆಯಾಗಿ ತನ್ನ 75 ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ, ಕಳೆದ ವರ್ಷ ಪೂರ್ತಿ  ಅಮೃತ ಮಹೋತ್ಸವ ಸಂಭ್ರಮಾಚರಣೆಯನ್ನು ಆಚರಿಸಿದೆ. ದೆಹಲಿಯ ತಾಲ್ಕಟೋರಾ ಒಳಾಂಗಣ ಕ್ರೀಡಾಂಗಣದಲ್ಲಿ ಕಳೆದ ಫೆಬ್ರವರಿ 25–26 ರಂದು ಆಯೋಜಿಸಲಾಗಿದ್ದ ಸಂಘದ ಅಮೃತ ಮಹೋತ್ಸವದ ಸಾಂಸ್ಕೃತಿಕ ಸಂಭ್ರಮ **'ಬಾರಿಸು ಕನ್ನಡ ಡಿಂಡಿಮವ'** ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ದೇಶದ ಗೌರವಾನ್ವಿತ ಮತ್ತು ಹೆಮ್ಮೆಯ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿ ಅವರು ನಗಾರಿ ಬಾರಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದ ಕ್ಷಣಗಳು ಅವಿಸ್ಮರಣೀಯ. ಆ ಸಂದರ್ಭ, ಮಾನ್ಯ ಪ್ರಧಾನಿಯವರು ತಮ್ಮ ಭಾಷಣದುದ್ದಕ್ಕೂ, ಕನ್ನಡ, ನಾಡು, ನುಡಿ, ಕಲೆ, ಸಂಸ್ಕೃತಿಯ ಬಗ್ಗೆ ಮತ್ತು ದೆಹಲಿ ಕರ್ನಾಟಕ ಸಂಘದ ಕಾರ್ಯ ಚಟುವಟಿಕೆಗಳ ಬಗ್ಗೆ ಮುಕ್ತ ಕಂಠದಿಂದ ಪ್ರಶಂಸಿದ್ದು ಕನ್ನಡಿಗರ ಹಿರಿಮೆಯನ್ನು ಹೆಚ್ಚಿಸಿತ್ತು. ಜೊತೆಗೆ, ಎರಡು ಗಂಟೆಗಳಿಗೂ ಹೆಚ್ಚು ಕಾಲ ಕಾರ್ಯಕ್ರಮದಲ್ಲಿ ಅವರು ಉಪಸ್ಥಿತರಿದ್ದು ಕರ್ನಾಟಕದ ವಿವಿಧ ಕಡೆಯಿಂದ ಬಂದಿದ್ದ ಕಲಾವಿದರು ನೀಡಿದ ಕಾರ್ಯಕ್ರಮಗಳನ್ನು ವೀಕ್ಷಿಸಿ ಆನಂದಿಸಿದ್ದರು. ಈ ಅಭೂತಪೂರ್ವ ಕಾರ್ಯಕ್ರಮವು ಯಶಸ್ವಿಗೊಂಡು ಒಂದು ಸಾರ್ವಕಾಲಿಕ ಇತಿಹಾಸವನ್ನು ರಚಿಸಿತು. ಸಾವಿರಾರು, ಲಕ್ಷಾಂತರ ಹೊರನಾಡ ಕನ್ನಡಿಗರಿಗೆ ಮತ್ತು ಕನ್ನಡಪರ ಸಂಘ ಸಂಸ್ಥೆಗಳಿಗೆ ಇನ್ನೂ ಹೆಚ್ಚಿನ ಭಾಷಾಭಿಮಾನದಿಂದ, ನಾಡಾಭಿಮಾನದಿಂದ ಕನ್ನಡವನ್ನು ಉಳಿಸಿ ಬೆಳೆಸಲು ಮತ್ತು ಕನ್ನಡಿಗರನ್ನು ಸಂಘಟಿಸಲು ಪ್ರೇರಣೆಯನ್ನು ನೀಡಿತು.

ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಕಾರ್ಯಕ್ರಮದ ಯಶಸ್ಸನ್ನು ಹಿನ್ನೆಲೆಯಲ್ಲಿಟ್ಟುಕೊಂಡು ಅಮೃತ ಮಹೋತ್ಸವ ಸಂಭ್ರಮಾಚರಣೆಯ ನೆನಪಿಗಾಗಿ ಹೊರತರಲಾದ ಬಾರಿಸು ಕನ್ನಡ ಡಿಂಡಿಮವ ಸ್ಮರಣ ಸಂಚಿಕೆಯ ಬಿಡುಗಡೆ ಕಾರ್ಯಕ್ರಮವನ್ನು ಜೂನ್ 04, 2023ರ ಭಾನುವಾರದಂದು ಬೆಂಗಳೂರಿನ ಪ್ರಸಿದ್ಧ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಳೆದ ಮೂವತ್ತು–ನಲ್ವತ್ತು ವರ್ಷಗಳಲ್ಲಿ, ದೂರದ ದೆಹಲಿಗೆ ಬಂದು ನೆಲಸಿ ತಮ್ಮ ಕೆಲಸ ಕಾರ್ಯಗಳ ಒತ್ತಡದ ನಡುವೆಯೂ ದೆಹಲಿ ಕರ್ನಾಟಕ ಸಂಘಕ್ಕೆ ಅಮೂಲ್ಯ ಸಮಯವನ್ನು ನೀಡಿ, ದೆಹಲಿ ಕನ್ನಡಿಗರಿಗೆ ಸೇವೆ ಸಲ್ಲಿಸಿದ ಸಂಘದ ಅನೇಕ ಸದಸ್ಯರು, ತಮ್ಮ ಸೇವಾ ನಿವೃತ್ತಿ, ವರ್ಗಾವಣೆ ಅಥವಾ ಇನ್ನಿತರ ಕಾರಣಗಳಿಂದ ಬೆಂಗಳೂರಿಗೆ, ಕರ್ನಾಟಕದ ಇತರೆ ಪ್ರದೇಶಗಳಿಗೆ ಹಿಂತಿರುಗಿ ಬಂದು ನೆಲೆಸಿದ್ದಾರೆ. ಸಂಘದ ಅಂತಹ ಎಲ್ಲಾ ಹಿರಿಯ ದೆಹಲಿ ಕನ್ನಡಿಗರನ್ನು ಗೌರವಿಸಿ ಸನ್ಮಾನಿಸಲು ಮತ್ತು ಸಂಘದ ಅಮೃತ ಮಹೋತ್ಸವ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಲು ಆಯೋಜಿಸಲಾಗಿದ್ದ ಈ ಸಮಾರಂಭವು  ಸುಮಾರು ಒಂದು ಸಾವಿರಕ್ಕೂ ಹೆಚ್ಚು ಕನ್ನಡಾಭಿಮಾನಿಗಳಿಂದ ತುಂಬಿ ತುಳುಕಿದ್ದ ರವೀಂದ್ರ ಕಲಾಕ್ಷೇತ್ರದ ಸಭಾಂಗಣದಲ್ಲಿ ಅತ್ಯಂತ ವಿಜೃಂಭಣೆಯಿಂದ ಮೂಡಿ ಬಂದಿತು. ಆಗಮಿಸಿದ್ದ ಅತಿಥಿಗಳಿಂದ ದೀಪ ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ವಿದ್ಯುಕ್ತ ಚಾಲನೆ ನೀಡಲಾಯಿತು. ನಾಡಗೀತೆಯೊಂದಿಗೆ ಸಭಾ ಕಾರ್ಯಕ್ರಮ ಆರಂಭವಾಯಿತು.

ಸ್ಮರಣ ಸಂಚಿಕೆ ಬಿಡುಗಡೆ ಸಮಾರಂಭದಲ್ಲಿ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದಂತಹ ಶ್ರೀ ಸ್ಫಟಿಕಾಪುರಿ ಮಹಾಸಂಸ್ಥಾನ ಮಠದ ಪೂಜ್ಯ ಶ್ರೀ ನಂಜಾವಧೂತ ಮಹಾಸ್ವಾಮೀಜಿಗಳು ಮಾತನಾಡಿ, ದೆಹಲಿ ಕರ್ನಾಟಕ ಸಂಘದ ಅಮೃತ

ಮಹೋತ್ಸವದ ಸಂದರ್ಭದಲ್ಲಿ ಅತಿ ದೊಡ್ಡ ಕಾರ್ಯಕ್ರಮವನ್ನು ಮಾಡುವ ಸಾಹಸವನ್ನು ತೋರಿದ ಸಂಘದ ಅಧ್ಯಕ್ಷರಾದಂತಹ ಶ್ರೀ ಸಿ.ಎಂ. ನಾಗರಾಜ ಮತ್ತು ಅವರ ತಂಡದ ಬದ್ಧತೆ ಮೆಚ್ಚುವಂತದ್ದು. ಈ ಸಂದರ್ಭದಲ್ಲಿ ಗಣ್ಯ ವ್ಯಕ್ತಿಗಳ ಸಂಘಟನೆ, ಸಂಪನ್ಮೂಲಗಳ ಕ್ರೂಡೀಕರಣ, ಸರ್ಕಾರಗಳ ಒಪ್ಪಿಗೆ ಇವೆಲ್ಲವುಗಳನ್ನು ನಿರಾಯಾಸವಾಗಿ ಮಾಡಿದ್ದು, ಶ್ರೀ ನಾಗರಾಜ ಅವರ ಕ್ರಿಯಾಶೀಲತೆಯನ್ನು, ಸಂಘಟನಾ ಚಾತುರ್ಯವನ್ನು ತೋರಿಸಿಕೊಟ್ಟಿದೆ. ದೇಶದ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿ ಅವರಿಂದ ಕಾರ್ಯಕ್ರಮದ ಉದ್ಘಾಟನೆ ಮಾಡಿಸಿದ್ದು ಇತಿಹಾಸವನ್ನು ಸೃಷ್ಟಿಸಿದೆ. ಶ್ರೀ ನಾಗರಾಜ ಅವರು ಆಯೋಜಿಸುವ ಕಾರ್ಯಕ್ರಮಗಳಲ್ಲಿ ಮುಖ್ಯ ಅತಿಥಿಗಳು ದೇಶದ ರಾಷ್ಟ್ರಪತಿಗಳು ಇಲ್ಲಾ ಪ್ರಧಾನಮಂತ್ರಿಗಳಂತಹ ಗಣ್ಯಾತಿ ಗಣ್ಯವ್ಯಕ್ತಿಗಳಿಂದ ಕೂಡಿರುತ್ತವೆ. ರಾಷ್ಟ್ರ ರಾಜಧಾನಿಯಲ್ಲಿ ಕರ್ನಾಟಕ ಸಂಘವು ಹೆಚ್ಚು ಹೆಚ್ಚು ಕನ್ನಡಪರ ಕಾರ್ಯಕ್ರಮಗಳನ್ನು, ಕೆಲಸಗಳನ್ನು ಮಾಡುತ್ತಿರುವುದು ಹೆಮ್ಮೆಯ ಸಂಗತಿ ಎಂದು ಸ್ವಾಮೀಜಿಗಳು ಪ್ರಶಂಸೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಅತಿಥಿಗಳಾಗಿ ವೇದಿಕೆಯಲ್ಲಿ ಉಪಸ್ಥಿತರಿದ್ದ ಕನ್ನಡದ ಹಿರಿಯ ಕವಿ, ಸಾಹಿತಿ ಡಾ. ದೊಡ್ಡರಂಗೇಗೌಡ ಅವರು ಮಾತನಾಡಿ ದೆಹಲಿ ಕರ್ನಾಟಕ ಸಂಘ ಕೇವಲ ದೆಹಲಿಯಲ್ಲಿ ಮಾತ್ರವಲ್ಲ ಕರ್ನಾಟಕದಲ್ಲಿಯೂ ಕೂಡ ತನ್ನ ಚಟುವಟಿಕೆಗಳನ್ನು ಮಾಡುತ್ತಿರುವುದು ಖುಷಿಯ ಸಂಗತಿ. ಕನ್ನಡ ಭಾಷೆ ಸಾವಿರಾರು ವರ್ಷಗಳ ಪ್ರಾಚೀನತೆಯನ್ನು ಹೊಂದಿರುವಂತಹ ಭಾಷೆ. ಅದು ನಮ್ಮ ನಿಮ್ಮೆಲ್ಲರ ಉಸಿರು. ದೆಹಲಿಯಲ್ಲಿ ಕರ್ನಾಟಕ ಸಂಘದ ಸ್ಥಾಪನೆ, ಕನ್ನಡದ ಕುರಿತಾದ ಚಟುವಟಿಕೆಗಳು, ಸಂಘವು ನಡೆಸಿಕೊಂಡು ಬರುತ್ತಿರುವಂತಹ ಅಭಿಮತ ಮಾಸಪತ್ರಿಕೆ, ವಿಶೇಷ ವಿಚಾರ ಸಂಕಿರಣಗಳು, ಕಲಾಮಹೋತ್ಸವಗಳು, ಕವಿಗೋಷ್ಠಿಗಳನ್ನು ವರ್ಷದ 365 ದಿನಗಳಲ್ಲಿಯೂ ಕನ್ನಡ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ ಎಂದು ಸಂಘದ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ ದೆಹಲಿ ಕರ್ನಾಟಕ ಸಂಘದ ಪ್ರಸ್ತುತ ಅಧ್ಯಕ್ಷರಾಗಿರುವ ಶ್ರೀ ಸಿ.ಎಂ. ನಾಗರಾಜ ಅವರನ್ನು ಅಭಿನಂದಿಸಿದರು. ಸಂಘದ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ದೆಹಲಿಯಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳ ಮಿಂಚು ನಾಡಿನ ಮೂಲೆ ಮೂಲೆಗೂ ಪಸರಿಸಿದೆ. ದೆಹಲಿ ಅಂತಹ ಮಹಾನಗರಗಳಲ್ಲಿ ವಾಸಿಸುತ್ತಿರುವವರು ಕನ್ನಡದ ಮುಖ್ಯ ವಾಹಿನಿಗೆ ಬಂದು, ಬೆರೆತು, ಕನ್ನಡ ಕಲಿತು, ವ್ಯವಹಾರ ಮಾಡುವ ದೇಶಗಳಲ್ಲಿ ಕೂಡ ಬದುಕಲು ಸಾಧ್ಯ ಎಂದು ಹೇಳಿದರು. ಇಲ್ಲಿ ಬಿಡುಗಡೆ ಮಾಡಿದ ಅಮೃತ ಮಹೋತ್ಸವದ ಸ್ಮರಣ ಸಂಚಿಕೆ ಇದೆಲ್ಲವನ್ನು ಪ್ರಸ್ತಾಪ ಮಾಡಿದೆ ಎಂದು ಖುಷಿಯಿಂದ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ರಾಜ್ಯ ಕಂದಾಯ ಸಚಿವರಾದ ಶ್ರೀ ಕೃಷ್ಣಭೈರೇಗೌಡ ಅವರು ಮಾತನಾಡಿ ಹಲವು ವರ್ಷಗಳ ಹಿಂದೆ ದೆಹಲಿ ಕರ್ನಾಟಕ ಸಂಘವನ್ನು ಕಟ್ಟಿ, ದೆಹಲಿಗೆ ಹೋಗುವ ಕನ್ನಡಿಗರಿಗೆ ಒಂದು ಆಶ್ರಯ ತಾಣವನ್ನಾಗಿ ಮಾಡಿ ಅವರಿಗೆ ಸ್ಥಳೀಯವಾಗಿ ಬೇಕಾಗಿರುವಂತಹ ಸೌಕರ್ಯಗಳನ್ನು ನೀಡಿ, ದೇಶದ ರಾಜಧಾನಿಯಲ್ಲಿ ಕನ್ನಡಿಗರಿಗೆ ಸ್ವಂತ ಮನೆಯ ಭಾವನೆಯನ್ನು ಮೂಡಿಸುತ್ತಿರುವ ಇಂತಹ ಸಂಘವು ಯಶಸ್ವಿಯಾಗಿ 75 ವರ್ಷಗಳನ್ನು ಕಳೆದಿರುವಂತಹ ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸಿದರು. ದೆಹಲಿಯಲ್ಲಿ ಕಾರ್ಯನಿರ್ವಹಿಸುತ್ತಿರುವಂತಹ ಕರ್ನಾಟಕ ಸಂಘದ ಜವಾಬ್ದಾರಿ ಮತ್ತು ಕಾರ್ಯಕ್ಷಮತೆ ಎರಡು ಹೆಚ್ಚಿರುವುದರಿಂದ ಸಂಘದ ಮುಂಬರುವ ಯಾವುದೇ ಕಾರ್ಯಗಳಲ್ಲಿ, ಸನ್ನಿವೇಶಗಳಲ್ಲಿ ಕೂಡ ಅದರ ಜೊತೆಗೆ ನಾವು ನಿಲ್ಲುತ್ತೇವೆ ಎಂದು ಆಶ್ವಾಸನೆ ನೀಡುತ್ತಾ ಸಂಘವು ಇನ್ನೂ ಹೆಚ್ಚು ಬೆಳವಣಿಗೆಯಾಗಲಿ ಎಂದು ಶುಭ ಹಾರೈಸಿದರು.

ಮತ್ತೋರ್ವ ಮುಖ್ಯ ಅತಿಥಿಗಳಾದ ಕರ್ನಾಟಕ ರಾಜ್ಯ ಸರ್ಕಾರದ ಕೃಷಿ ಸಚಿವರಾದ ಶ್ರೀ ಎನ್. ಚೆಲುವರಾಯಸ್ವಾಮಿಯವರು ಮಾತನಾಡಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿರುವ ಶ್ರೀ ಸಿ.ಎಂ. ನಾಗರಾಜ ಮತ್ತು ಅವರ ಕಾರ್ಯಕಾರಿ ಸಮಿತಿ ದೆಹಲಿಯಲ್ಲಿ ಅತ್ಯದ್ಭುತ ಕಾರ್ಯಕ್ರಮಗಳನ್ನು ಮಾಡಿಕೊಂಡು ಹೋಗುತ್ತಿದ್ದಾರೆ. ದೇಶದ ಪ್ರಧಾನಮಂತ್ರಿಗಳನ್ನು ಕರೆಯಿಸಿ ಅಮೃತ ಮಹೋತ್ಸವ ಕಾರ್ಯಕ್ರಮವನ್ನು ಮಾಡಿ, ತದನಂತರ ಆ ಕಾರ್ಯಕ್ರಮದ ಸ್ಮರಣಸಂಚಿಕೆ ಪುಸ್ತಕವನ್ನು ಬೆಂಗಳೂರಿನಲ್ಲಿ ಇಂದು ಬಿಡುಗಡೆ ಮಾಡುತ್ತಿರುವುದು ಶ್ಲಾಘನೀಯ. ಬೆಂಗಳೂರಿನಲ್ಲಿ ಕನ್ನಡ ಕಾರ್ಯಕ್ರಮಗಳನ್ನು ಯೋಜನೆ ಮಾಡುವುದು ಸುಲಭದ ಮಾತು, ಆದರೆ ದೂರದ ದೆಹಲಿಯಲ್ಲಿ ಕನ್ನಡಕ್ಕಾಗಿ ಕಾರ್ಯಕ್ರಮಗಳನ್ನು ಮಾಡಿಕೊಳ್ಳುವುದು ಬಹಳ ಕಷ್ಟಕರವಾಗಿದ್ದು, ಇಂತಹ ಕೆಲಸಗಳ ಜೊತೆಗೆ ಯುಪಿಎಸ್ಸಿ ಓದಲು ದೆಹಲಿಗೆ ಬರುವ ಮಕ್ಕಳಿಗಾಗಿ ನೆರವು ನೀಡುತ್ತಾ ಮುಂದಿನ ದಿನಗಳಲ್ಲಿ ಹಲವಾರು ಒಳ್ಳೆಯ ಕೆಲಸಗಳನ್ನು ಮಾಡಲು ಯೋಜನೆ ಹಾಕಿಕೊಂಡಿರುವಂತಹ ದೆಹಲಿ ಕರ್ನಾಟಕ ಸಂಘದ ಕೆಲಸ ವಿಶೇಷ ಜವಾಬ್ದಾರಿಯುತವಾಗಿದೆ. ಅದ್ಭುತ ಕನ್ನಡ ಕೆಲಸಗಳಿಗೆ ಕೈಜೋಡಿಸುತ್ತಿರುವಂತಹ ಎಲ್ಲಾ ದೆಹಲಿ ಕನ್ನಡಿಗರಿಗೆ ಶುಭವಾಗಲಿ ಎಂದು ಮಾನ್ಯ ಸಚಿವರು ಹಾರೈಸಿದರು.

ವೇದಿಕೆಯಲ್ಲಿ ಉಪಸ್ಥಿತರಿದ್ದ ವಿಧಾನ ಪರಿಷತ್ ಸದಸ್ಯರಾದ ಶ್ರೀ ಆರ್. ದೇವೇಗೌಡ






ಅವರು ಮಾತನಾಡಿ ಕರ್ನಾಟಕದ ಕಲೆ ಮತ್ತು ಸಂಸ್ಕೃತಿಯನ್ನು ತೋರಿಸುವಂತಹ ಕೆಲಸವನ್ನು ಮಾಡುತ್ತಿರುವ ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು ಸೇರಿದಂತೆ ಎಲ್ಲ ಕಾರಣಕರ್ತರು ಕನ್ನಡ ನಾಡಿನ ವಿವಿಧ ಜಿಲ್ಲೆಗಳ ಕಲೆ, ಸಂಸ್ಕೃತಿಯನ್ನು ರಾಷ್ಟ್ರ ರಾಜಧಾನಿಯಲ್ಲಿ ತೋರಿಸಿಕೊಟ್ಟು ನಾವೆಲ್ಲರು ಹೆಮ್ಮೆ ಪಡುವಂತೆ ಮಾಡಿದ್ದಾರೆ ಎಂದು ಪ್ರಶಂಸಿಸುತ್ತಾ ಸಂಘದ ಎಲ್ಲಾ ಪದಾಧಿಕಾರಿಗಳನ್ನು ಮತ್ತು ಅಧ್ಯಕ್ಷರನ್ನು ಅಭಿನಂದಿಸಿದರು.

ಇನ್ನೋರ್ವ ಅತಿಥಿಗಳಾಗಿ ಆಗಮಿಸಿದ್ದ ಮಾಲೂರು ವಿಧಾನಸಭಾ ಕ್ಷೇತ್ರದ ಶಾಸಕರಾಗಿರುವ ಶ್ರೀ ಕೆ.ವೈ. ನಂಜೇಗೌಡ ಅವರು ಮಾತನಾಡಿ 1948 ರಲ್ಲಿ ಪ್ರಾರಂಭಗೊಂಡ ದೆಹಲಿ ಕರ್ನಾಟಕ ಸಂಘ ಇಂದಿನವರೆಗೂ ಇಷ್ಟು ದೊಡ್ಡದಾಗಿ ಬೆಳೆದಿರುವುದು ನಮಗೆಲ್ಲ ಒಂದು ಆಶ್ಚರ್ಯದ ಸಂಗತಿ. ಇದಕ್ಕೆಲ್ಲ ಸಹಕಾರ ನೀಡಿರುವ ಸರ್ಕಾರಗಳು, ಸಚಿವರುಗಳು, ಮಹನೀಯರುಗಳಿಗೆ ನಾವು ಋಣಿ, ಮುಂದಿನ ದಿನಗಳಲ್ಲಿ ಕರ್ನಾಟಕ ಸಂಘ ಯಾವುದೇ ಹೊಸ ಯೋಜನೆಗಳನ್ನು ಹಾಕಿಕೊಂಡರೂ ಸಹ ನಮ್ಮ ಸರ್ಕಾರ ಅದಕ್ಕೆ ಪೂರ್ಣ ಸಹಕಾರ ನೀಡಲು ಸಿದ್ಧವಾಗಿರುತ್ತದೆ. ಸಂಘದ ಅಧ್ಯಕ್ಷರಾಗಿರುವ ಶ್ರೀ ಸಿ.ಎಂ. ನಾಗರಾಜ ಮತ್ತು ಅವರ ತಂಡ ಇನ್ನು ಹೆಚ್ಚಿನ ಕೆಲಸಗಳನ್ನು ಮಾಡಲೆಂದು ಈ ಮೂಲಕ ಅವರು ಶುಭ ಹಾರೈಸುತ್ತೇನೆ ಎಂದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿಶೇಷ ಆಯುಕ್ತರು (ಹಣಕಾಸು) ಶ್ರೀ ಜಯರಾಮ್ ರಾಯಪುರ ಐ.ಆರ್.ಎಸ್. ಅವರು ಮಾತನಾಡಿ ಹೊರನಾಡಿನಲ್ಲಿ ಕನ್ನಡವನ್ನು ಬೆಳೆಸಿಕೊಂಡು ಬರುವುದೊಂದು ಮಹಾನ್ ಸಾಧನೆಯ ಕೆಲಸ. ಕಾಕತಾಳಿಯ ಎಂಬಂತೆ ಶ್ರೀ ಸಿ.ಎಂ. ನಾಗರಾಜ ಅವರಂತಹ ನಾಯಕತ್ವ ಕರ್ನಾಟಕ ಸಂಘಕ್ಕೆ ದೊರಕಿದೆ. ಕರ್ನಾಟಕದ ಮೂಲೆ ಮೂಲೆಯಿಂದ ಸಾವಿರಾರು ಸಂಖ್ಯೆಯಲ್ಲಿ ಕಲಾವಿದರನ್ನು ದೆಹಲಿಗೆ ಕರೆಯಿಸಿಕೊಂಡು ಕರ್ನಾಟಕ ಸಂಘದ ಸ್ಥಾಪನೆಯ 75ನೇಯ ವರ್ಷದ ಅಮೃತ ಮಹೋತ್ಸವವನ್ನು ಆಯೋಜಿಸಿ ಕಲಾವಿದರಿಂದ ನೃತ್ಯ, ನಾಟಕ ಪ್ರದರ್ಶನ ಮಾಡಿಸಿ, ಎಲ್ಲ ಕನ್ನಡಿಗರಿಗೆ ಅಲ್ಲಿಂದಲೇ ಕನ್ನಡದ ಮನರಂಜನೆ ಉಣಬಡಿಸಿದ್ದಾರೆ. ಈ ಎಲ್ಲ ಶ್ರೇಯಸ್ಸು ಮತ್ತು ಕೀರ್ತಿ ಅಧ್ಯಕ್ಷರಾದ ಶ್ರೀ ನಾಗರಾಜ ಮತ್ತು ಅವರ ಕಾರ್ಯಕಾರಿ ಸಮಿತಿಗೆ ಸಲ್ಲುತ್ತದೆ ಎಂದು ಕರ್ನಾಟಕ ಸಂಘದ ಕಾರ್ಯಗಳನ್ನು ಶ್ಲಾಘಿಸುತ್ತಾ ಅಭಿನಂದನೆಗಳನ್ನು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ತಮ್ಮ ಅಧ್ಯಕ್ಷೀಯ ಮಾತುಗಳನ್ನಾಡಿ ನಮ್ಮ ಸಂಘವು 1948ರಲ್ಲಿ ಪ್ರಥಮವಾಗಿ ಪ್ರಾರಂಭವಾದಾಗ ಶ್ರೀ ವಿ. ನರಹರಿ ರಾವ್, ಕರ್ನಾಟಕದ ಮೊದಲ ಮುಖ್ಯಮಂತ್ರಿ ಶ್ರೀ ಕೆ.ಸಿ. ರೆಡ್ಡಿ, ನಂತರದಲ್ಲಿ ಶ್ರೀ ಎಸ್.ವಿ. ಕೃಷ್ಣಮೂರ್ತಿ ರಾವ್, ಡಾ ಸರೋಜಿನಿ ಮಹಿಷಿ, ಶ್ರೀ ಜಿ.ವೈ. ಕೃಷ್ಣನ್, ಶ್ರೀ ಕೆ.ಆರ್. ನಾಗರಾಜರವರಂತಹ ಮಹಾನ್ ನಾಯಕರುಗಳ ಕೊಡುಗೆ ಇದೆ. ಅಂತಹ ಹಿರಿಯರು ಕಟ್ಟಿ ಬೆಳೆಸಿದ ಕರ್ನಾಟಕ ಸಂಘಕ್ಕೆ ಇಂದು ತನ್ನದೇ ಆದ ಕಟ್ಟಡ, ಸಭಾಂಗಣವಿದೆ, ದೆಹಲಿಯಲ್ಲಿ ಕನ್ನಡ ಶಾಲೆಯೂ ಇದೆ. ಶ್ರೀ ಕೆ.ಸಿ. ರೆಡ್ಡಿ ಅವರು ಕೇಂದ್ರ ಸಚಿವರಾಗಿದ್ದಾಗ ಕರ್ನಾಟಕ ಸಂಘಕ್ಕೆ ದೆಹಲಿಯಲ್ಲಿ ಒಂದು ಜಾಗವನ್ನು ಮಾಡಿಕೊಟ್ಟರು. ಇಂದು ದೆಹಲಿಯ ಕೇಂದ್ರ ಭಾಗ ಲೋಧಿ ಎಸ್ಟೇಟ್‌ನಲ್ಲಿರುವ ಕನ್ನಡ ಶಾಲೆಗೆ, ಆರ್.ಕೆ. ಪುರಂನಲ್ಲಿ ಕರ್ನಾಟಕ ಸಂಘಕ್ಕೆ ಕಟ್ಟಡ ನಿರ್ಮಾಣ ಮಾಡಲು ಜಾಗ ಪಡೆಯುವಲ್ಲಿ ಪ್ರಮುಖ ಕಾರಣಕರ್ತರೆಂದರೆ ಅದು ಶ್ರೀ ಕೆ.ಸಿ. ರೆಡ್ಡಿ, ಡಾ. ಸರೋಜನಿ ಮಹಿಷಿ ಮತ್ತು ಜಿ.ವೈ. ಕೃಷ್ಣನ್ ಅವರಂತಹ ಮಹನೀಯರುಗಳು. ಮುಂದೊಂದು ಕಾಲದಲ್ಲಿ ನಾವು ಇಂದಿನ ಖ್ಯಾತ ಕಂದಾಯ ಮಂತ್ರಿಗಳಾದ ಶ್ರೀ ಕೃಷ್ಣ ಬೈರೇಗೌಡ ಅವರಂತವರುಗಳನ್ನು ನೆನೆಸಿಕೊಳ್ಳುವ ಕಾಲ ಬರುತ್ತದೆ. ದೆಹಲಿಗೆ ಉನ್ನತ ಶಿಕ್ಷಣ ಮತ್ತು ಯುಪಿಎಸ್ಸಿ ಓದಲು ಬರುವ ಮಕ್ಕಳಿಗೆ ಉಚಿತ ವಸತಿ ಮತ್ತು ಊಟದ ವ್ಯವಸ್ಥೆ ಮಾಡಲು ಸಂಘ ಕನಸು ಕಂಡಿದೆ, ಇದಕ್ಕೆ ನಾಡಿನ ಪೂಜ್ಯ ಗುರುಗಳ ಆಶೀರ್ವಾದ ಮತ್ತು ರಾಜ್ಯ ಸಚಿವರುಗಳ ಸಹಕಾರ ಬೇಕು ಎಂದು ಮನವಿ ಮಾಡಿಕೊಂಡರು. ಪರಮಪೂಜ್ಯ ಶ್ರೀ ಡಾ.ನಿರ್ಮಲಾನಂದನಾಥ ಮಹಾ ಸ್ವಾಮೀಜಿಗಳು ಇಂದಿನ ಕಾರ್ಯಕ್ರಮಕ್ಕೆ ಬರಬೇಕಾಗಿತ್ತು ಆದರೆ ಹುಣ್ಣಿಮೆ ಇರುವ ಕಾರಣದಿಂದಾಗಿ ಅವರು ತಮ್ಮ ಶ್ರೀ ಕ್ಷೇತ್ರದಿಂದಲೇ ಆಶೀರ್ವಾದದೊಂದಿಗೆ ಶುಭ ಸಂದೇಶವನ್ನು ಕಳುಹಿಸಿದ್ದಾರೆ ಎಂದು



ತಿಳಿಸಿದರು. ಸಂಘವು ಅಮೃತ ಮಹೋತ್ಸವದ ನೆನಪಿಗಾಗಿ ಸ್ಮರಣಸಂಚಿಕೆಯನ್ನು ಹೊರ ತರುತ್ತಿರುವ ಸಂದರ್ಭದಲ್ಲಿ ಶ್ರೀ ದಯಾನಂದ್ ಸರ್, ಶ್ರೀ ಶಶಿ ಸರ್, ಶ್ರೀ ದೊಡ್ಮನೆ ವೆಂಕಟೇಶ್, ಶ್ರೀ ರಂಗಣ್ಣ, ಶ್ರೀ ತಿಮ್ಮಣ್ಣ, ಶ್ರೀ ಪುಟ್ಟಣ್ಣ ಅವರಂತಹ ಅನೇಕ ಹಿರಿಯರನ್ನು, ಮಿತ್ರರನ್ನು ಕೇಳಿಕೊಂಡಾಗ ಅವರುಗಳು ಜಾಹಿರಾತು ನೀಡುವ ಮೂಲಕ ನಮಗೆ ಸುಮಾರು 80 ಲಕ್ಷ ರೂಗಳಷ್ಟು ಧನ ಸಹಾಯ ಮಾಡಿ ಸಹಕಾರ ನೀಡಿದ್ದಾರೆ. ಈ ಎಲ್ಲ ಉದಾರ ದಾನಿಗಳನ್ನು ಹೃದಯಪೂರ್ವಕವಾಗಿ ಅಭಿನಂದಿಸುತ್ತೇನೆ ಎಂದರು. ಇನ್ನು ದೆಹಲಿ ಕರ್ನಾಟಕ ಸಂಘದ ಮುಂದೆ ಹಲವಾರು ಯೋಜನೆಗಳು ಇದ್ದು, ಅವೆಲ್ಲವುಗಳನ್ನು ನಾವು ನೀವು ಸೇರಿ ಕಾರ್ಯಗತ ಮಾಡಬೇಕಾಗಿದೆ, ಇದಕ್ಕೆ ನಿಮ್ಮೆಲ್ಲರ ಸಂಪೂರ್ಣ ಸಹಕಾರ ಬೇಕೆಂದು ಮನವಿ ಮಾಡಿಕೊಂಡರು.



ಈ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ 75 ವರ್ಷಗಳ ಸುದೀರ್ಘ ಬೆಳವಣಿಗೆಗೆ ಶ್ರಮಿಸಿದಂತಹ ಕರ್ನಾಟಕ ಸಂಘದ ಹಲವು ಹಿರಿಯ ಸದಸ್ಯರುಗಳು ಮತ್ತು ಮಾಜಿ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗು ಹಿಂದಿನ ಪದಾಧಿಕಾರಿಗಳ ಸೇವೆಯನ್ನು ಸ್ಮರಿಸಿ ಅಭಿನಂದನೆಗಳನ್ನು ಸಲ್ಲಿಸಲಾಯಿತು. ಅಂತಹ ಮಹನೀಯರುಗಳಲ್ಲಿ ಶ್ರೀಮತಿ ಪ್ರಭಾಮೂರ್ತಿ, ಶ್ರೀಮತಿ ಉಷಾ ಭರತಾದ್ರಿ, ಶ್ರೀ ಎಂ.ಎಲ್. ಷಣ್ಮುಖ, ಶ್ರೀಮತಿ ಸ್ವರ್ಣಲತಾ ಮೃತ್ಯುಂಜಯ, ಶ್ರೀ ಜಿ.ಎಂ. ಲಿಂಗರಾಜು, ಶ್ರೀ ಅಂಜನಿಗೌಡ, ಶ್ರೀ ತ್ಯಾಗೇಶ್ ಮೂರ್ತಿ, ಶ್ರೀ ಟಿ.ಪಿ. ಬೆಳ್ಳಿಯಪ್ಪ, ಶ್ರೀಮತಿ ಜಲಜಾರಾಜು, ಡಾ. ಹೇಮಲತಾ ಮೂರ್ತಿ, ಶ್ರೀಮತಿ ಹೇಮಲತಾ ಗುಡ್ಡೇಗೌಡ, ಶ್ರೀ ಪಿ.ಸಿ. ಶ್ರೀನಿವಾಸ್, ಡಾ. ಬಿ.ಟಿ. ಚಿದಾನಂದ ಮೂರ್ತಿ ಮತ್ತು ಶ್ರೀ ಸರವು ಕೃಷ್ಣಭಟ್ ಅವರುಗಳು ಪ್ರಮುಖರಾಗಿದ್ದಾರೆ. ಇವರಲ್ಲಿ ಸಮಾರಂಭದಲ್ಲಿ ಭಾಗಿಯಾಗಿದ್ದವರಿಗೆ ಗೌರವ ಸಮರ್ಪಣೆ ಅರ್ಪಿಸಲಾಯಿತು. ಜಾಹೀರಾತುಗಳನ್ನು ನೀಡಿ ಸಂಘಕ್ಕೆ ಸಹಕಾರ ನೀಡಿದ ಸಂಸ್ಥೆಗಳು ಮತ್ತು ಗಣ್ಯವ್ಯಕ್ತಿಗಳನ್ನು ಸಹ ಗೌರವಿಸಿ ಸನ್ಮಾನಿಸಲಾಯಿತು.

ಅಮೃತ ಮಹೋತ್ಸವ ಹಿನ್ನೆಲೆಯಲ್ಲಿ ಸಂಘದ ಪ್ರಸ್ತುತ ಅಧ್ಯಕ್ಷರು, ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರುಗಳನ್ನು ಅಭಿನಂದಿಸಲಾಯಿತು. ಈ ಐತಿಹಾಸಿಕ ಅಮೃತ ಮಹೋತ್ಸವ ಸ್ಮರಣಸಂಚಿಕೆ ಬಿಡುಗಡೆ ಸಮಾರಂಭದ ಮೊದಲು ಮತ್ತು ವೇದಿಕೆ ಕಾರ್ಯಕ್ರಮದ ನಂತರ ವೈವಿದ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರಸ್ತುತಿಗೊಂಡವು. ಶ್ರೀ ಪುಷ್ಪಾಂಜಲಿ ನಾಟ್ಯ ಕಲಾ ಅಕಾಡೆಮಿ, ಬೆಂಗಳೂರು ವತಿಯಿಂದ ವಿದ್ವಾನ್ ಕೋಲಾರ ರಮೇಶ್ ಅವರು ನಿರ್ದೇಶಿಸಿದ್ದಂತಹ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಕುರಿತು ನೃತ್ಯ ರೂಪಕ, ಶ್ರೀ ನವ ಚೇತನ ನೃತ್ಯ ಕಲಾ ಅಕಾಡೆಮಿ ಹೊಸಕೋಟೆ ಕಲಾವಿದರಿಂದ ಜಾನಪದ ನೃತ್ಯ ವೈಭವ, ಶ್ರೀ ನಾಟ್ಯಾಂಜಲಿ ನಾಟ್ಯ ಶಾಲೆ ದೊಡ್ಡದುನ್ನಸಂದ್ರ ಅವರ ವತಿಯಿಂದ ಶಾಸ್ತ್ರೀಯ ನೃತ್ಯ, ಸಮಯೋಗ ಕಲಾ ಶಾಲೆ, ಬೆಂಗಳೂರು ಇವರ ಕಲಾವಿದರಿಂದ ಸಮೂಹ ನೃತ್ಯ ವೈಭವ, ಸಂಜೀವಿನಿ ಕಲಾ ಸಂಸ್ಥೆ ವತಿಯಿಂದ ಶಾಸ್ತ್ರೀಯ ನೃತ್ಯ, ಕೈಲಾಸ್ ಕಲಾಧರ ಕಲ್ಚರಲ್ ಆಂಡ್ ಚಾರಿಟೇಬಲ್ ಟ್ರಸ್ಟ್, ಬೆಂಗಳೂರು ವತಿಯಿಂದ ನೃತ್ಯರೂಪಕ, ಎಂಡೆವರ್ಸ್ ಇಂಟರ್‌ನ್ಯಾಷನಲ್ ಶಾಲೆಯ ಕಲಾ ತಂಡ ಮುಗಳೂರು, ಆನೇಕಲ್ ವತಿಯಿಂದ ಜೋಗದ ಸಿರಿ ಬೆಳಕಿನಲ್ಲಿ ಹಾಡಿಗೆ ವಿಶೇಷ ನೃತ್ಯ ಕಾರ್ಯಕ್ರಮಗಳು ಮೂಡಿಬಂದವು. ಸುಮಾರು ಆರು ಗಂಟೆಗಳ ಕಾಲ ಕಿಕ್ಕಿರಿದು ತುಂಬಿದ್ದ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಲಾವಿದರೂ ಸೇರಿದಂತೆ ಸುಮಾರು 1100 ಕ್ಕೂ ಹೆಚ್ಚು ಕನ್ನಡಿಗರು ಭಾಗವಹಿಸಿ, ಮನರಂಜನಾ ಕಾರ್ಯಕ್ರಮಗಳನ್ನು ವೀಕ್ಷಿಸಿದರು. ಫೇಸ್‌ಬುಕ್ ಲೈವ್ ನೇರ ಪ್ರಸಾರವನ್ನು ಆಯೋಜಿಸದ್ದರಿಂದ ಕಾರ್ಯಕ್ರಮವು ಆನ್‌ಲೈನ್ ಮೂಲಕ 2,600 ರಷ್ಟು ವೀಕ್ಷಣೆಗಳನ್ನು ಕಂಡಿತು. ಸಂಘದ ಉಪಾಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್ ಅವರು ಅತಿಥಿಗಳನ್ನು ಮತ್ತು ಆಗಮಿಸಿದ್ದ ಕನ್ನಡಾಭಿಮಾನಿಗಳನ್ನು ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು, ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್ ಮತ್ತು ಕಾರ್ಯಾಕಾರಿ ಸಮಿತಿ ಸದಸ್ಯರಾದ ಶ್ರೀ ಸಂತೋಷ ಜೆ ಅವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು. ಕಾರ್ಯಕಾರಿ ಸಮಿತಿ ಸದಸ್ಯೆಯರಾದ ಶ್ರೀಮತಿ ಮಾಲಿನಿ ಪ್ರಹ್ಲಾದ್ ಮತ್ತು ಶ್ರೀಮತಿ ಸವಿತಾ ನೆಲ್ಲಿ ಅವರು ಗಣ್ಯರ ಅಭಿನಂದನಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಸಂಘದ ಜಂಟಿ ಕಾರ್ಯದರ್ಶಿ ಶ್ರೀ ಬಿ. ನಾರಾಯಣ ಅವರು ಕಾರ್ಯಕ್ರಮದಲ್ಲಿ





ಆಗಮಿಸಿದ್ದ ಎಲ್ಲ ಅತಿಥಿಗಳನ್ನು, ಗಣ್ಯಾತಿ ಗಣ್ಯರನ್ನು ಮತ್ತು ಅಪಾರ ಸಂಖ್ಯೆಯಲ್ಲಿ ಸಭಾಂಗಣದಲ್ಲಿ ಉಪಸ್ಥಿತರಿದ್ದ ಎಲ್ಲ ಕನ್ನಡಿಗರಿಗೆ, ಕಲಾವಿದರಿಗೆ, ಸಂಘದ ಸದಸ್ಯರಿಗೆ ಮತ್ತು ಬೆಂಗಳೂರಿನ ಕನ್ನಡಾಭಿಮಾನಿಗಳಿಗೆ ವಂದನೆಗಳನ್ನು ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಕರ್ನಾಟಕ ಶೈಲಿಯ ರುಚಿಕರ ಭೋಜನ ವ್ಯವಸ್ಥೆ ಮಾಡಲಾಗಿತ್ತು. ದೆಹಲಿ ಕರ್ನಾಟಕ ಸಂಘದಿಂದ ದೆಹಲಿಯ ಹೊರಗಡೆ, ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ಒಂದು ವೈಶಿಷ್ಟಪೂರ್ಣ ಕಾರ್ಯಕ್ರಮ ಯಶಸ್ವಿಯಾಗಿ ಆಯೋಜನೆಗೊಂಡಿದ್ದು ಸಂಘದ ಹಿರಿಮೆಯನ್ನು ಮತ್ತಷ್ಟು ಹೆಚ್ಚಿಸಿದೆ. ಪ್ರತಿಷ್ಠಿತ ರವೀಂದ್ರ ಕಲಾಕ್ಷೇತ್ರದಲ್ಲಿ ಅತ್ಯಂತ ವ್ಯವಸ್ಥಿತವಾಗಿ ಕಾರ್ಯಕ್ರಮವನ್ನು ಏರ್ಪಡಿಸಲು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಸದಸ್ಯರ ಪರವಾಗಿ ತುಂಬು ಹೃದಯದ ಧನ್ಯವಾದಗಳು.

***ಯಲ್ಲಾಲಿಂಗ ಕೊಪ್ಪದ***
ಸದಸ್ಯರು, ಅಭಿಮತ ಸಂಪಾದಕ ಮಂಡಳಿ











## ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸ್ಮರಣಸಂಚಿಕೆ ಬಿಡುಗಡೆ ಸಮಾರಂಭದ ದೃಶ್ಯ ಸಂಭ್ರಮ












# ಅಖಂಡ ಬೆಂಗಳೂರಿನ ಕನಸು ಕಂಡ ಧೀಮಂತ ನಾಯಕ ನಾಡಪ್ರಭು ಕೆಂಪೇಗೌಡರು

**ಬೆಂಗಳೂರು ನಗರದ ನಿರ್ಮಾತೃ ನಾಡಪ್ರಭು ಕೆಂಪೇಗೌಡರ 514ನೇ ಜನ್ಮ ಜಯಂತಿ ಸ್ಮರಣೆ ಸಂದರ್ಭ ಅವರ ಸಂಕ್ಷಿಪ್ತ ಜೀವನ ಪರಿಚಯ**

ಕೆಂಪೇಗೌಡರು ಸ್ವಾತಂತ್ರ ಪೂರ್ವ ಭಾರತದಲ್ಲಿ ವಿಜಯನಗರ ಸಾಮ್ರಾಜ್ಯದ ಸಾಮಂತ ರಾಜ್ಯವಾಗಿದ್ದ ಯಲಹಂಕ ನಾಡಿನ ಮುಖ್ಯಸ್ಥರಾಗಿದ್ದರು. ಅವರು 16ನೇ ಶತಮಾನದ 1510–1569ರ ಕಾಲ ಘಟ್ಟದಲ್ಲಿ ಬೆಂಗಳೂರು (ಹಿಂದಿನ ಬೆಂದಕಾಳೂರು) ಟೌನ್ ಅಭಿವೃದ್ಧಿಗೆ ಪ್ರಸಿದ್ಧರಾಗಿದ್ದಾರೆ. ಅವರನ್ನು ಸ್ಥಳೀಯವಾಗಿ ನಾಡಪ್ರಭು ಕೆಂಪೇಗೌಡ ಎಂದು ಪೂಜಿಸಲಾಗುತ್ತದೆ. ಕೆಂಪೇಗೌಡರು ಬೆಂಗಳೂರು ಹೊರ ವಲಯದಲ್ಲಿರುವ ಯಲಹಂಕದಲ್ಲಿ 27 ಜೂನ್ 1510ರಲ್ಲಿ ಕೆಂಪ ನಂಜೇಗೌಡ ಮತ್ತು ಲಿಂಗಾಂಬೆ (ಲಿಂಗಮ್ಮ) ದಂಪತಿಗಳ ಸುಪುತ್ರನಾಗಿ ಜನಿಸಿದರು. ಕುಲದೇವತೆಯಾದ ಕೆಂಪಮ್ಮ ಹಾಗೂ ಭೈರವರ ಅನುಗ್ರಹದಿಂದ ಜನಿಸಿದ ಕಾರಣ ದಂಪತಿಗಳು ಮಗುವಿಗೆ ಕೆಂಪ, ಕೆಂಪರಾಯ ಎಂದು ಕರೆಯುತ್ತಿದ್ದರು, ಪ್ರಜೆಗಳು ಪ್ರೀತಿಯಿಂದ ಚಿಕ್ಕರಾಯ, ಕೆಂಪರಾಯ ಎಂದು ಸಂಬೋಧಿಸುತ್ತಿದ್ದರು. ಅವರು ದಕ್ಷಿಣ ಕರ್ನಾಟಕದ ವಿಶೇಷವಾಗಿ ಹಳೆಯ ಮೈಸೂರು ಪ್ರಾಂತ್ಯದಲ್ಲಿ ಪ್ರಬಲವಾದ ಒಕ್ಕಲಿಗ ಸಮುದಾಯಕ್ಕೆ ಸೇರಿದವರು. ಕೆಂಪೇಗೌಡರ ತಂದೆ ಕೆಂಪ ನಂಜೇಗೌಡರು ವಿಜಯನಗರ ಸಾಮ್ರಾಜ್ಯದ ಅಡಿಯಲ್ಲಿ ಮುಖ್ಯಸ್ಥರಾಗಿದ್ದರು. ಕೆಂಪೇಗೌಡರು ತಮ್ಮ ಶಿಕ್ಷಣವನ್ನು ಗುರುಕುಲದಲ್ಲಿ ಸಾಮಾನ್ಯ ಶಿಕ್ಷಣದ ಜೊತೆಗೆ, (ರಾಜಕೌಶಲ್ಯ ಮತ್ತು ಯುದ್ಧ ಕೌಶಲ್ಯ) ರಾಜೋಚಿತವಾದ ಕತ್ತಿ ವರಸೆ, ಕುದುರೆ ಸವಾರಿ, ಮಲ್ಲ ಕಾಳಗ, ರಾಜನೀತಿ, ಆರ್ಥಿಕ ತಿಳುವಳಿಕೆ, ಮುಂತಾದ ವಿಷಯಗಳಲ್ಲೂ ಪರಿಣಿತಿ ಪಡೆಯುತ್ತಾರೆ. ಯುವಕ ಕೆಂಪ ರಾಯರು ವಿದ್ಯಾಭ್ಯಾಸ ಪೂರ್ಣಗೊಂಡ ಬಳಿಕ ಗುರುಗಳ ಆದೇಶದಂತೆ ನಾಡಿನಾದ್ಯಂತ ಸಂಚರಿಸಿ ಲೋಕಾನುಭವ ಪಡೆದುಕೊಳ್ಳುತ್ತಾರೆ. ಒಮ್ಮೆ ಕೆಂಪೇಗೌಡರು ವಿಜಯ ದಶಮಿ ಉತ್ಸವದಲ್ಲಿ ಪಾಲ್ಗೊಂಡು ಮಲ್ಲಯುದ್ಧ ಸ್ಪರ್ಧೆಯಲ್ಲಿ ಎದುರಾಳಿ ತಿರುಮಲ ರಾಯರನ್ನು ಸೋಲಿಸಿ ಶ್ರೀ ಕೃಷ್ಣ ದೇವರಾಯರಿಂದ ಮೆಚ್ಚುಗೆ ಗಳಿಸುತ್ತಾರೆ. ಅಲ್ಲಿಂದ ಮುಂದೆ ತಂದೆಯವರ ಜೊತೆ ಸೇರಿ ವಿಜಯನಗರದ ಅರಸರ ಪರವಾಗಿ ಯುದ್ಧಗಳಲ್ಲಿ ಭಾಗವಹಿಸಿ ಶತ್ರು ಸಾಮಂತರನ್ನು ಸದೆಬಡಿಯುತ್ತಾರೆ. 1528 ರಲ್ಲಿ ಕೆಂಪೇಗೌಡರಿಗೆ ಹಳೆ ಬೆಂಗಳೂರಿನ ಸೋದರ ಮಾವನ ಮಗಳಾದ, ಚೆನ್ನಾಂಬೆಯವರೊಂದಿಗೆ (ಚೆನ್ನಮ್ಮ) ಮದುವೆ ಹಾಗೂ ಇದೇ ಸಂದರ್ಭದಲ್ಲಿ ಯುವರಾಜ ಪಟ್ಟಾಭಿಷೇಕವನ್ನು ಮಾಡಲಾಗುತ್ತದೆ. 1530ರಲ್ಲಿ ಕೆಂಪೇಗೌಡರ ಜೇಷ್ಠ ಪುತ್ರನಾಗಿ ಗಿಡ್ಡೆಗೌಡರು ಜನಿಸುತ್ತಾರೆ. ಮುಪ್ಪಿನಲ್ಲಿದ್ದ ಕೆಂಪ ನಂಜೇಗೌಡರು



ಮಗನಿಗೆ ರಾಜ್ಯವಾಳುವ ಎಲ್ಲಾ ಅರ್ಹತೆಗಳಿವೆ ಎಂದು ತಿಳಿದು 1531 ರಲ್ಲಿ ನಾಡಪ್ರಭುಗಳ ಅಧಿಕಾರ ವಹಿಸಿಕೊಡುತ್ತಾರೆ.

1537 ರಲ್ಲಿ ಕೆಂಪೇಗೌಡರು ವಿಜಯನಗರದ ಚಕ್ರವರ್ತಿ ಅಚ್ಯುತ ದೇವರಾಯರಿಂದ ಬೆಂಗಳೂರಿನಲ್ಲಿ ಕೋಟೆಯನ್ನು ನಿರ್ಮಿಸಲು ಅನುಮತಿ ಪಡೆದರು. ಈ ಪ್ರಯತ್ನಕ್ಕಾಗಿ ಆದಾಯವನ್ನು ಸಂಗ್ರಹಿಸಲು ಅವರು ಸುತ್ತಮುತ್ತಲಿನ 12 ಗ್ರಾಮಗಳ ಉಸ್ತುವಾರಿಯನ್ನು ಸಹ ಪಡೆದರು. ಬಾಲ್ಯದಿಂದ ಶ್ರೀ ಕೃಷ್ಣದೇವರಾಯರ ಆಡಳಿತ ಅವಧಿಯ ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಿರಿಯನ್ನು ಕಣ್ಣಾರೆ ಕಂಡಿದ್ದ ಕೆಂಪೇಗೌಡರಿಗೆ ತಮ್ಮ ನಾಡಿನಲ್ಲೂ ಈ ಎಲ್ಲಾ ವೈಭವಗಳನ್ನು ಮರು ಪ್ರತಿಷ್ಠಾಪಿಸುವ ಬಯಕೆ ಮನದಲ್ಲಿ ಮೂಡಿತ್ತು. ಇದರಿಂದಾಗಿ ಹಲವು ಬಾರಿ ಹಂಪಿಗೆ ಭೇಟಿ ಕೊಟ್ಟು ಅಲ್ಲಿನ ವ್ಯವಸ್ಥೆಗಳೆಲ್ಲವನ್ನು ಮನದಟ್ಟು ಮಾಡಿಕೊಂಡು ಜ್ಯೋತಿಷಿಗಳನ್ನು, ಭೂಗರ್ಭ, ನೀರಾವರಿ ತಜ್ಞರನ್ನು, ವಾಸ್ತುಶಿಲ್ಪಿಗಳನ್ನು ಸಂಪರ್ಕಿಸಿ ಮತ್ತು ಪರಿಸರದ ಪರಿಶೀಲನೆ ಮಾಡಿಸಿ ಮಾಹಿತಿ ಪಡೆಯುತ್ತಾರೆ. ಆ ಸ್ಥಾನದ ಪ್ರಮುಖರೊಂದಿಗೆ ಚರ್ಚಿಸಿ ಗುರುತಿಸಿದ ಕೋಟೆ, ಪೇಟೆ, ಗುಡಿ, ಕೆರೆ, ಮತ್ತು ಉದ್ಯಾನ ಈ ಐದು ಅಂಗಗಳಿಂದ ಕೂಡಿದ ರಾಜಧಾನಿಯ ನಿರ್ಮಾಣಕ್ಕೆ ನೀಲಿ ನಕ್ಷೆ ತಯಾರಿಸುತ್ತಾರೆ. ಕೆಂಪೇಗೌಡರು ಬೆಂಗಳೂರು ಕೋಟೆ ಎಂಬ ಬೆಟ್ಟದ ಮೇಲೆ ಕೋಟೆಯನ್ನು ನಿರ್ಮಿಸುತ್ತಾರೆ. ಕೋಟೆಯ ಹೆಬ್ಬಾಗಿಲು ಈಗಿನ ವಿಕ್ಟೋರಿಯಾ ಆಸ್ಪತ್ರೆಯ ಬಳಿಯ ಕೋಟೆಯಲ್ಲಿತ್ತು. ರಾಜಧಾನಿಗೆ ನವದ್ವಾರಗಳಿರಬೇಕು. ದೇವಾಲಯಗಳಲ್ಲಿ ಪ್ರತಿದಿನವೂ ಪೂಜೆಗಳು ನಡೆಯುತ್ತಿರಬೇಕು ಮತ್ತು 9 ಕೆರೆಗಳು ಸದಾ ಕಾಲ ನೀರಿನಿಂದ ತುಂಬಿರಬೇಕೆಂಬುದು ಗೌಡರ ಆಶಯವಾಗಿತ್ತು. ಗೌಡರ ಇಚ್ಛೆಯಂತೆ ಕೋಟೆಗೆ ನಾಲ್ಕು ಮಹಾ ದ್ವಾರಗಳನ್ನು, ಮತ್ತು ಐದು ಕಿರಿದ್ವಾರಗಳನ್ನು ನಿರ್ಮಿಸಲಾಯಿತು. ರಕ್ಷಣೆಗಾಗಿ ಕೆಲವು ರಹಸ್ಯ ದ್ವಾರಗಳನ್ನು ಇಡಲಾಯಿತು. ನಾಲ್ಕು ಮಹಾದ್ವಾರಗಳಲ್ಲಿ ಪೂರ್ವಕ್ಕೆ ಹಲಸೂರು ದ್ವಾರ, ಪಶ್ಚಿಮಕ್ಕೆ ಸೊಂಡೆ ಕೊಪ್ಪದ ದ್ವಾರ, ಉತ್ತರಕ್ಕೆ ಯಲಹಂಕದ ದ್ವಾರ, ದಕ್ಷಿಣಕ್ಕೆ ಆನೇಕಲ್ ದ್ವಾರ ಹಾಗೂ ಐದು ಕಿರಿದ್ವಾರಗಳಲ್ಲಿ, ವರ್ತೂರು ಬಾಗಿಲು, ಸರ್ಜಾಪುರದ ಬಾಗಿಲು, ಕೆಂಗೇರಿ ಬಾಗಿಲು, ಯಶವಂತಪುರದ ಬಾಗಿಲು, ಮತ್ತು ಕಾನಕಾನಹಳ್ಳಿ (ಕನಕಪುರ) ಬಾಗಿಲುಗಳಾಗಿದ್ದವು. ಅವೆಲ್ಲವುಗಳು ಈಗ ಬೆಂಗಳೂರು ನಗರದ ಹೃದಯ ಭಾಗವಾಗಿವೆ. ವಿವಿಧ ವಸ್ತುಗಳಿಗೆ ನಗರದ ಹಲವು ಭಾಗಗಳಲ್ಲಿ ವಿವಿಧ ಮಾರುಕಟ್ಟೆಗಳನ್ನು (ಪೇಟೆಗಳನ್ನು) ನಿರ್ಮಿಸಿದ ಕೀರ್ತಿ ಕೆಂಪೇಗೌಡರಿಗೆ ಸಲ್ಲುತ್ತದೆ.ಅವರು ನಗರದಲ್ಲಿ ಹಲವಾರು ರಸ್ತೆಗಳು, ಟ್ಯಾಂಕ್‌ಗಳನ್ನು ಮತ್ತು ಬೇರೆ ಬೇರೆ ವೃತ್ತಿಯವರಿಗೆ, ಅನ್ಯ ಜಾತಿಯ, ಧರ್ಮೀಯರಿಗೆ ಕಟ್ಟಿದ ಅರಳೆಪೇಟೆ, ಅಕ್ಕಿಪೇಟೆ, ಕುಂಬಾರಪೇಟೆ, ರಾಗಿಪೇಟೆ, ಗಾಣಿಗರಪೇಟೆ, ಮಡಿವಾಳಪೇಟೆ, ಗೊಲ್ಲರಪೇಟೆ, ಹೂವಾಡಿಗರ ಪೇಟೆ, ಮಂಡಿಪೇಟೆ, ಅಂಚೆಪೇಟೆ, ಬಳೆಪೇಟೆ, ತರಗುಪೇಟೆ, ಸುಣ್ಣಕಲ್ಲು ಪೇಟೆ, ಮೇದಾರಪೇಟೆ, ಕುರುಬರಪೇಟೆ, ಮುತ್ಯಾಲಪೇಟೆ, ಕುಂಚಿಟಿಗರ ಪೇಟೆ, ದೊಡ್ಡಪೇಟೆ, ಚಿಕ್ಕಪೇಟೆ, ಉಪ್ಪಾರಪೇಟೆ, ಕಲ್ಲಾರಪೇಟೆ, ತಿಗಳರ ಪೇಟೆ, ಮಾಮೂಲ್ ಪೇಟೆ, ನಗರ್ತ ಪೇಟೆ, ಸುಲ್ತಾನಪೇಟೆ, ಮನವರ್ತ ಪೇಟೆ, ಕಬ್ಬನ್ ಪೇಟೆ, ಬಿನ್ನಿಪೇಟೆಗಳು, ಅನೇಕ ಉದ್ಯಾನಗಳು ,ಕೆರೆಗಳು, ನಗರದ ಯೋಜನೆಗಳು ಇದಕ್ಕೆ ಸಾಕ್ಷಿ. ಬೆಂಗಳೂರು ಸಿಟಿ ಉದ್ಯಾನನಗರಿ

ಎಂದು ಖ್ಯಾತಿ ಪಡೆದದ್ದು ಕೆಂಪೇಗೌಡರ ದೂರ ದೃಷ್ಟಿಕೋನ ಮತ್ತು ಕ್ರಿಯಾ ಯೋಜನೆಗಳಿಂದ. ನಾಡಿನ ಇತಿಹಾಸದಲ್ಲಿ ಯಾವುದೇ ಸ್ವತಂತ್ರ ರಾಜರು ಸಹ ತಮ್ಮ ಅವಧಿಯಲ್ಲಿ ಇಷ್ಟು ಕೆರೆಗಳನ್ನು ಕಟ್ಟಿಸಿರುವುದು ಕಂಡುಬರುವುದಿಲ್ಲ ಎಂಬುದು ಇವರ ಹೆಗ್ಗಳಿಕೆ. ಕೆಂಪೇಗೌಡರು ಕಟ್ಟಿಸಿದ ಕೆರೆಗಳಲ್ಲಿ ಕೆಂಪಾಂಬುದಿ ಕೆರೆ, ಧರ್ಮಾಂಬುದಿ ಕೆರೆ, ಸಂಪಂಗಿರಾಮಕೆರೆ, ಚೆನ್ನಮ್ಮನ ಕೆರೆ, ಕಾರಂಜಿ ಕೆರೆ, ಹಲಸೂರು ಕೆರೆ, ಕೆಂಪಾಪುರ ಅಗ್ರಹಾರ ಕೆರೆ, ಸಿದ್ದಿಕಟ್ಟೆ ಕೆರೆ, ಗಿಡ್ಡಪ್ಪನಕೆರೆ ಮುಖ್ಯವಾದವು. ಈ ಕೆರೆಗಳ ಪೈಕಿ ಸುಮಾರು ಅಭಿವೃದ್ಧಿಯ ಹೆಸರಿನಲ್ಲಿ ಕಾಣದಂತಾಗಿದೆ. ಹಾಗೆಯೇ ಸುಮಾರು ಕೆರೆಗಳನ್ನು ಗ್ರಾಮೀಣ ಪ್ರದೇಶದ ಜನರಿಗೆ ಕುಡಿಯುವ ನೀರಿಗಾಗಿ ನಿರ್ಮಿಸಲಾಗಿದೆ. ಆಧುನಿಕ ಬೆಂಗಳೂರು ನಗರಕ್ಕೆ ಅಂದಿನ ಕಾಲದಲ್ಲೇ ಅಡಿಪಾಯ ಹಾಕಿದ ಕೀರ್ತಿ ಕೆಂಪೇಗೌಡರಿಗೆ ಸಲ್ಲುತ್ತದೆ. 1537 ರಲ್ಲಿ ಬೆಂಗಳೂರು ನಗರವನ್ನು ಅವರ ಪರಿಕಲ್ಪನೆಯಂತೆ ಸ್ಥಾಪನೆ ಮಾಡಲಾಯಿತು. ಮೂರು ನದಿಗಳ ಸಂಗಮದ ಆಯಕಟ್ಟಿನ ಸ್ಥಳದಲ್ಲಿರುವ ಬೆಟ್ಟದ ಮೇಲೆ ಕೋಟೆಯನ್ನು ನಿರ್ಮಿಸಲಾಗಿದೆ. ಕೋಟೆಯ ಸುತ್ತಲೂ ಬೆಳೆದ ಪಟ್ಟಣವು ವಿಶಾಲವಾದ ರಸ್ತೆಗಳು, ಕಾಲುವೆಗಳು ಮತ್ತು ಉದ್ಯಾನವನಗಳೊಂದಿಗೆ ಉತ್ತಮವಾಗಿ ಯೋಜಿಸಲಾಗಿದೆ ಮತ್ತು ಅದರಂತೆ ಲೇಔಟ್ ಮಾಡಲಾಗಿತ್ತು. ಕೆಂಪೇಗೌಡರು ಪಟ್ಟಣದಲ್ಲಿ ಹಲವಾರು ದೇವಾಲಯಗಳು ಮತ್ತು ಇತರ ಸಾರ್ವಜನಿಕ ಕಟ್ಟಡಗಳನ್ನು ನಿರ್ಮಿಸಿದರು. ಸುಭದ್ರ ರಾಜಧಾನಿಯ ನಿರ್ಮಾಣದ ಜೊತೆ ಜೊತೆಗೆ, ನಾಡಿನ ಆಯಕಟ್ಟಿನ ಸ್ಥಳಗಳಲ್ಲಿ ಕೋಟೆಗಳನ್ನು ಕಟ್ಟಿಸಿ ಸೈನಿಕರನ್ನು ನಿಯೋಜಿಸಿದರು. ಸೈನಿಕರ ಕುಟುಂಬದವರಿಗೋಸ್ಕರ ಕೋಟೆಗಳ ಸಮೀಪದಲ್ಲಿಯೇ ವಸತಿ ಸೌಕರ್ಯಗಳನ್ನು ಕಲ್ಪಿಸಿಕೊಟ್ಟರು. ಕೆಂಪೇಗೌಡರು ಕೇವಲ ನಗರ ನಿರ್ಮಾಣ ಮಾಡಲಿಲ್ಲ ಬದಲಿಗೆ, ಪೆನನ್ಸೂಲಾರ್ ನೈಸ್ ಎಂಬ ಪರ್ವತ ಶ್ರೇಣಿಗಳ ನಡುವೆ ನಗರ ನಿರ್ಮಾಣ ಮಾಡಿ ತಮ್ಮ ವೈಜ್ಞಾನಿಕ ತತ್ವ ಸಾರಿದರು. ಆ ಕಾರಣಕ್ಕಾಗಿಯೇ ಬೆಂಗಳೂರು ಸಮಶೀತೋಷ್ಣ ಗುಣವುಳ್ಳ ವಾಸಯೋಗ್ಯ ನಗರವೆನಿಸಿದೆ. ಕೆಂಪೇಗೌಡರ ಕಾಲದ ಏಳು ಕೋಟೆಗಳಲ್ಲಿ ಪ್ರಮುಖವಾದವುಗಳೆಂದರೆ ಬೆಂಗಳೂರಿನ ಕೋಟೆ, ಮಾಗಡಿ ಕೋಟೆ, ಸಾವನದುರ್ಗ ಮತ್ತು ನೆಲಪಟ್ಟಣ ಕೋಟೆ, ಹುತ್ತರಿ ದುರ್ಗದ ಏಳು ಸುತ್ತಿನ ಕೋಟೆ, ಹುಲಿಯೂರು ದುರ್ಗದ ಕೋಟೆ, ಕುದೂರಿನ ಭೈರವನ ದುರ್ಗದ ಕೋಟೆ, ರಾಮನಗರದ ರಾಮದುರ್ಗ ಕೋಟೆಗಳಾಗಿವೆ. ಇಂದಿನ ಸ್ಮಾರ್ಟ್ ಸಿಟಿ ಜಾಗತಿಕ ಕಲ್ಪನೆ ಏನು ಇದೆಯೋ ಹಾಗೂ ನಮ್ಮ ದೇಶದ ಮಾನ್ಯ ಪ್ರಧಾನಮಂತ್ರಿಗಳು ಏನು ಹೇಳುತ್ತಿದ್ದಾರೋ, ಸ್ಮಾರ್ಟ್ ಸಿಟಿ ಕಲ್ಪನೆಯನ್ನು ಐದು ಶತಮಾನಗಳ ಹಿಂದೆ ಜಾರಿಗೆ ತಂದಂತಹ ಮಹಾನ್ ವ್ಯಕ್ತಿ ಕೆಂಪೇಗೌಡರು. ಅವರು ಅನೇಕ ಸಾಮಾಜಿಕ ಸುಧಾರಣೆಗಳಿಗೆ ಸಹ ಹೆಸರುವಾಸಿಯಾಗಿದ್ದಾರೆ. "ಬಂಡಿ ದೇವರು" ಎಂಬ ಪದ್ಧತಿಯ ಸಂದರ್ಭದಲ್ಲಿ ಅವಿವಾಹಿತ ಮಹಿಳೆಯರ ಬೆರಳುಗಳನ್ನು ಕತ್ತರಿಸುವ ಪದ್ಧತಿಯನ್ನು ರದ್ದುಗೊಳಿಸಿದಂತಹ ಘಟನೆ ಸೇರಿದಂತೆ, ಅವರು ಸತಿ ಪದ್ಧತಿಯನ್ನೂ ಸಹ ರದ್ದುಗೊಳಿಸಿದ್ದರು. ಇಂದು ನಮ್ಮ ಬೆಂಗಳೂರು ಐ.ಟಿ.ಬಿ.ಟಿ. ಹಬ್ ಆಗಿ ಮಾರ್ಪಟ್ಟಿದೆ. ದೇಶದ ಮತ್ತು ರಾಷ್ಟ್ರದ, ದೇಶ–ವಿದೇಶಗಳಿಂದ, ರಾಷ್ಟ್ರದ ಮೂಲೆ ಮೂಲೆಗಳಿಂದ ಅತೀ ಹೆಚ್ಚು ಜನರನ್ನು ಆಕರ್ಷಣೆ ಮಾಡುತ್ತಿದೆ. ಅತೀ ಹೆಚ್ಚು ಜನರು ಬೆಂಗಳೂರಿಗೆ ಹೋಗಿ ವಾಸಿಸಲು ಇಷ್ಟಪಡುತ್ತಾರೆ. ಇವತ್ತಿನ ಕರ್ನಾಟಕದ ಶೇಕಡಾ 70 ರಷ್ಟು ಆದಾಯ ಬೆಂಗಳೂರಿನಿಂದಲೇ ಆಗುತ್ತಿದೆ. ಇಂತಹ ಮಹಾನ್ ಪುರುಷ ನಮ್ಮ ಕರ್ನಾಟಕದಲ್ಲಿ ಹುಟ್ಟಿರುವುದು ನಮ್ಮ ಸೌಭಾಗ್ಯವೇ ಸರಿ.

ಕೆಂಪೇಗೌಡರು ಕಲೆ ಮತ್ತು ಕಲಿಕೆಯ ಪೋಷಕರಾಗಿದ್ದರು. ಅವರು ಬೆಂಗಳೂರಿನಲ್ಲಿ ಹಲವಾರು ಗುರುಕುಲಗಳನ್ನು ನಿರ್ಮಿಸಿದರು ಹಾಗು ಸಂಗೀತ, ನೃತ್ಯ ಮತ್ತು ನಾಟಕ ಕಲೆಗಳನ್ನು ಬೆಂಬಲಿಸಿದರು. ಅವರು ಸ್ವತಃ ಬಹುಭಾಷಾ ವಿದ್ವಾಂಸರಾಗಿದ್ದರು. ಹಲವಾರು ಕವನಗಳು ಮತ್ತು ನಾಟಕಗಳನ್ನು ಬರೆದಿದ್ದಾರೆ. ಅವರು ವ್ಯಾಪಾರ ಮತ್ತು ವಾಣಿಜ್ಯವನ್ನು ಪ್ರೋತ್ಸಾಹಿಸಿದರು ಮತ್ತು ಬೆಂಗಳೂರನ್ನು ಪ್ರಮುಖ ವ್ಯಾಪಾರ ಕೇಂದ್ರವನ್ನಾಗಿ ಮಾಡಿ, ಎಲ್ಲಾ ವರ್ಗದ ಜನರನ್ನು ಬೆಂಗಳೂರಿಗೆ ಸ್ವಾಗತಿಸಿ ಕಾಸ್ಮೋಪಾಲಿಟನ್ ಸಿಟಿಯನ್ನಾಗಿ ಮಾಡಿದರು. ಯಾವುದೇ ಜಾತಿ ಧರ್ಮಗಳ ಭೇದ ಭಾವಗಳಿಲ್ಲದೆ ಎಲ್ಲಾ ಕುಲ ಕಸುಬುಗಳನ್ನು ರಕ್ಷಿಸಲು ಜಾತಿಗೊಂದು ಪೇಟೆ ಕಟ್ಟಿ ವಾಣಿಜ್ಯ, ಉದ್ಯಮ ಪೋಷಿಸಿದ ನೈಜ, ಜಾತ್ಯಾತೀತ ತತ್ವ ಪಾಲಿಸಿದ ರಾಜರು ಶ್ರೀ ಕೆಂಪೇಗೌಡರು. ಎಲ್ಲಾ ಜನರನ್ನು ಸಮಾನವಾಗಿ ಕಂಡು ಮತ್ತು ನ್ಯಾಯಯುತವಾದ ಶ್ರೇಷ್ಠ ಆಡಳಿತಗಾರರಾಗಿದ್ದರು, ಪ್ರಜೆಗಳಿಂದ ಪ್ರೀತಿಸಲ್ಪಟ್ಟು ಮತ್ತು ಗೌರವಿಸಲ್ಪಟ್ಟಿದ್ದರು.

ಕೆಂಪೇಗೌಡರು ಕರ್ನಾಟಕದ ನಿಜವಾದ ಮಹಾನ್ ನಾಯಕರು ಮತ್ತು ಅವರ ಪರಂಪರೆಯು ಅಭಿವೃದ್ಧಿ ಹೊಂದುತ್ತಿರುವ ಬೆಂಗಳೂರಿನಲ್ಲಿ ನೆಲೆಸಿದೆ. ಎಲ್ಲರಿಗೂ ಅವರು ಸ್ಫೂರ್ತಿಯಾಗಿದ್ದಾರೆ ಮತ್ತು ಒಬ್ಬ ವ್ಯಕ್ತಿಯು ಹೇಗೆ ತನ್ನ ಸಮಾಜಮುಖಿ ಕಾರ್ಯಗಳಿಂದ ಜಗತ್ತಿನಲ್ಲಿ ಸೃಜನಾತ್ಮಕ ಬದಲಾವಣೆಯನ್ನು ಮಾಡಬಹುದು ಎಂಬುದನ್ನು ಅವರು ನೆನಪಿಸುತ್ತಾರೆ. ಅವರು ವೀರರ ಮತ್ತು ಒಕ್ಕಲಿಗ ವಂಶಸ್ಥರಾಗಿದ್ದು, ಶೌರ್ಯ ಮತ್ತು ನಾಯಕತ್ವದ ಕೌಶಲಕ್ಕೆ ಹೆಸರುವಾಸಿಯಾಗಿದ್ದಾರೆ. ಈ ಗುಣಗಳನ್ನು ಸ್ವತಃ ಕೆಂಪೇಗೌಡರು ಚಿಕ್ಕ ವಯಸ್ಸಿನಿಂದಲೂ ಪ್ರದರ್ಶಿಸಿದವರು. ಕೆಂಪೇಗೌಡರು ವಿಜಯನಗರದ ಸೈನ್ಯದ ಶ್ರೇಣಿಯ ಮೂಲಕ ಶೀಘ್ರವಾಗಿ ಉತ್ತುಂಗಕ್ಕೆ ಏರಿದವರು.

ಅವರು ಸುದೀರ್ಘ ಮತ್ತು ಸಮೃದ್ಧ ಆಳ್ವಿಕೆಯ ನಂತರ 1569ರಲ್ಲಿ ಕುಣಿಗಲ್‌ನಿಂದ ಬರುವಾಗ ಮಾಗಡಿಗೆ ಸಮೀಪದ ಕೆಂಪಾಪುರ ಬಳಿ ಮಡಿದರೆಂಬುದು ತಿಳಿದುಬರುತ್ತದೆ. ಬೆಂಗಳೂರಿನ ಜನತೆ ಮತ್ತು ಕರ್ನಾಟಕ ನಾಡಿನ ಸಮಸ್ತ ಕನ್ನಡಿಗರ ಮನದಲ್ಲಿ ಎಂದೆಂದಿಗೂ ಅವರು ಅಮರರಾಗಿದ್ದಾರೆ. ಮಹಾನಗರ ಬೆಂಗಳೂರಿನ ಅಭಿವೃದ್ಧಿಗೆ ಅವರು ನೀಡಿದ ಕೊಡುಗೆಗಳನ್ನು ಇಂದಿಗೂ ಸ್ಮರಿಸಲಾಗುತ್ತಿದೆ. ಅವರು ನಗರದ ಇತಿಹಾಸ ಮತ್ತು ಭವಿಷ್ಯದ ಸಾಮರ್ಥ್ಯದ ಸಂಕೇತವಾಗಿದ್ದಾರೆ. ಅವರ ಸ್ಮರಣಾರ್ಥ ದೇವನಹಳ್ಳಿ ಸಮೀಪವಿರುವ ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಮತ್ತು ನಗರದ ಕೇಂದ್ರ ಬಸ್ ನಿಲ್ದಾಣಗಳಿಗೆ ಅವರ ಹೆಸರನ್ನಿಟ್ಟಿರುವುದು ಹಾಗು ಏರ್‌ಪೋರ್ಟ್ ಬಳಿ ಅವರ 108 ಅಡಿ ಎತ್ತರದ ಪ್ರತಿಮೆ ಸ್ಥಾಪಿತಗೊಂಡು ರಾಷ್ಟ್ರದ ಹೆಮ್ಮೆಯ ಪ್ರಧಾನಮಂತ್ರಿ ಸನ್ಮಾನ್ಯ ಶ್ರೀ ನರೇಂದ್ರ ಮೋದಿ ಅವರಿಂದ ಇತ್ತೀಚೆಗೆ ಲೋಕಾರ್ಪಣೆಯಾಗಿರುವುದು ನಮ್ಮ ಹೆಮ್ಮೆಯ ನಾಡ ಪ್ರಭು ಕೆಂಪೇಗೌಡರಿಗೆ ಸಂದ ಗೌರವ.

ತಮ್ಮ ತ್ಯಾಗ ಬಲಿದಾನದಿಂದ ನಾಡಿನ ಜನರನ್ನು ಕಾಪಾಡಿದ ಎಲ್ಲಾ ಸಮುದಾಯದವರ ಏಳಿಗೆಗಾಗಿ ಪ್ರಾಣಾರ್ಪಣೆ ಗೈದ ಅವರನ್ನು ಸ್ಮರಿಸುತ್ತಾ, ದೆಹಲಿ ಎನ್‌ಸಿಆರ್ ಕನ್ನಡಿಗರಿಗೆ ಮತ್ತು ಕರುನಾಡಿನ, ಹೊರನಾಡಿನ ಸಮಸ್ತ ಕನ್ನಡಿಗರಿಗೆ ಅವರ ಜನ್ಮ ಜಯಂತಿಯ ಹಾರ್ದಿಕ ಶುಭಾಶಯಗಳನ್ನು ಕೋರುತ್ತೇನೆ.




***ವಸಂತ ಕುಮಾರ್***
ದೆಹಲಿ ಪೊಲೀಸ್ ಅಧಿಕಾರಿ,
ಹೆಮ್ಮೆಯ ದೆಹಲಿ ಕನ್ನಡಿಗ

# ಕರ್ನಾಟಕ ಸರ್ಕಾರದ ನೂತನ ಸಚಿವ ಸಂಪುಟ



**ಶ್ರೀ ಸಿದ್ದರಾಮಯ್ಯ**
ಮಾನ್ಯ ಮುಖ್ಯಮಂತ್ರಿಗಳು
ಹಣಕಾಸು, ಸಂಪುಟ ವ್ಯವಹಾರ, ಆಡಳಿತ ಸುಧಾರಣೆ, ಗುಪ್ತಚರ, ವಾರ್ತಾ ಇಲಾಖೆ, ಐ.ಟಿ. ಬಿಟಿ., ಮೂಲ ಸೌಕರ್ಯ ಅಭಿವೃದ್ಧಿ ಹಾಗು ಹಂಚಿಕೆಯಾಗದ ಇತರ ಖಾತೆಗಳು



**ಶ್ರೀ ಡಿ.ಕೆ. ಶಿವಕುಮಾರ್**
ಮಾನ್ಯ ಉಪ ಮುಖ್ಯಮಂತ್ರಿಗಳು
ಬೃಹತ್ ಮತ್ತು ಮಧ್ಯಮ ನೀರಾವರಿ ಮತ್ತು ಬೆಂಗಳೂರು ನಗರಾಭಿವೃದ್ಧಿ

## ಕ್ಯಾಬಿನೆಟ್ ಮಂತ್ರಿಗಳು ಮತ್ತು ಅವರ ಖಾತೆಗಳು




**ಡಾ. ಜಿ. ಪರಮೇಶ್ವರ**
ಗೃಹ



**ಶ್ರೀ ಕೆ.ಜೆ. ಜಾರ್ಜ್**
ಇಂಧನ




**ಶ್ರೀ ಕೆ.ಎಚ್. ಮುನಿಯಪ್ಪ**
ಆಹಾರ ಮತ್ತು ನಾಗರಿಕ ಪೂರೈಕೆ ಗ್ರಾಹಕ ವ್ಯವಹಾರ



**ಶ್ರೀ ಎಚ್.ಕೆ. ಪಾಟೀಲ್**
ಕಾನೂನು ಮತ್ತು ಸಂಸದೀಯ ವ್ಯವಹಾರ ಮತ್ತು ಪ್ರವಾಸೋದ್ಯಮ



**ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ಅಂಗವಿಕಲರು ಮತ್ತು ಹಿರಿಯ ನಾಗರಿಕ ಸಬಲೀಕರಣ



**ಶ್ರೀ ಕೃಷ್ಣ ಬೈರೇಗೌಡ**
ಕಂದಾಯ



**ಶ್ರೀ ಆರ್. ರಾಮಲಿಂಗ ರೆಡ್ಡಿ**
ಸಾರಿಗೆ ಮತ್ತು ಮುಜರಾಯಿ



**ಶ್ರೀ ದಿನೇಶ್ ಗುಂಡೂರಾವ್**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ



**ಶ್ರೀ ಮಧು ಬಂಗಾರಪ್ಪ**
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ



**ಶ್ರೀ ಎಂ.ಬಿ. ಪಾಟೀಲ್**
ಮಧ್ಯಮ ಮತ್ತು ಬೃಹತ್ ಕೈಗಾರಿಕೆ



**ಶ್ರೀ ಪ್ರಿಯಾಂಕ್ ಖರ್ಗೆ**
ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್



**ಶ್ರೀ ಎನ್. ಚೆಲುವರಾಯ ಸ್ವಾಮಿ**
ಕೃಷಿ



**ಶ್ರೀ ಭೈರತಿ ಸುರೇಶ್**
ನಗರಾಭಿವೃದ್ಧಿ ಮತ್ತು ಪಟ್ಟಣ ಯೋಜನೆ



**ಡಾ. ಎಚ್.ಸಿ. ಮಹಾದೇವಪ್ಪ**
ಸಮಾಜ ಕಲ್ಯಾಣ



**ಡಾ. ಎಂ.ಸಿ. ಸುಧಾಕರ್**
ಉನ್ನತ ಶಿಕ್ಷಣ



**ಶ್ರೀ ಕೆ.ಎನ್. ರಾಜಣ್ಣ**
ಸಹಕಾರ




**ಶ್ರೀ ಸತೀಶ್ ಜಾರಕಿಹೊಳಿ**
ಲೋಕೋಪಯೋಗಿ



**ಶ್ರೀ ಸಂತೋಷ್ ಲಾಡ್**
ಕಾರ್ಮಿಕ




**ಶ್ರೀ ಈಶ್ವರ್ ಖಂಡ್ರೆ**
ಅರಣ್ಯ ಮತ್ತು ಪರಿಸರ ವಿಜ್ಞಾನ



**ಶ್ರೀ ಶರಣ ಬಸಪ್ಪ ದರ್ಶನಾಪುರ**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ಯಮ



**ಶ್ರೀ ಮಂಕಾಲ್ ವೈದ್ಯ**
ಮೀನು, ಬಂದರು ಮತ್ತು ಒಳನಾಡು ಜಲ ಸಾರಿಗೆ



**ಶ್ರೀ ಶರಣ ಪ್ರಕಾಶ್ ಪಾಟೀಲ್**
ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿ



**ಶ್ರೀ ಆರ್.ಬಿ. ತಿಮ್ಮಾಪುರ್**
ಅಬಕಾರಿ



**ಶ್ರೀ ಎಸ್. ಎಸ್. ಮಲ್ಲಿಕಾರ್ಜುನ**
ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ




**ಶ್ರೀ ಬಿ. ನಾಗೇಂದ್ರ**
ಯುವಜನ ಕ್ರೀಡೆ ಮತ್ತು ಎಸ್.ಟಿ. ಕಲ್ಯಾಣ



**ಶ್ರೀ ರಹೀಂ ಖಾನ್**
ಪೌರ ಆಡಳಿತ ಮತ್ತು ಹಜ್



**ಶ್ರೀ ಜಮೀರ್ ಅಹಮದ್**
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತ ಕಲ್ಯಾಣ



**ಶ್ರೀ ಶಿವಾನಂದ ಎಸ್. ಪಾಟೀಲ್**
ಜವಳಿ, ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ



**ಶ್ರೀ ಕೆ. ವೆಂಕಟೇಶ್**
ಪಶು ಸಂಗೋಪನೆ ಮತ್ತು ರೇಷ್ಮೆ ಕೃಷಿ

# ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸ್ಮರಣ ಸಂಚಿಕೆ ಬಿಡುಗಡೆ ಸಮಾರಂಭದಲ್ಲಿ ಪ್ರಸ್ತುತಿಗೊಂಡ ಸಾಂಸ್ಕೃತಿಕ ಕಾರ್ಯಕ್ರಮಗಳು






















ಶ್ರೀ ಸ್ಫಟಿಕಾಪುರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ನಂಜಾವಧೂತ ಮಹಾಸ್ವಾಮೀಜಿಗಳು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜರವರನ್ನು ರವೀಂದ್ರ ಕಲಾಕ್ಷೇತ್ರದಲ್ಲಿ ಅಭಿನಂದಿಸಿದ ಕ್ಷಣ

## ಅಭಿನಂದನೆ

### ಲೋಕಸಭೆಯ ಜಂಟಿ ಕಾರ್ಯದರ್ಶಿಗಳಾಗಿ ಶ್ರೀ ಸೋಮಶೇಖರ್ ನೇಮಕ



ಬಂಧುಗಳೇ, ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಶ್ರೀ ಸೋಮಶೇಖರ್‌ರವರು ಹಲವಾರು ರಾಜ್ಯದ, ಕೇಂದ್ರದ ಇಲಾಖೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ, ಅನೇಕ ಕೇಂದ್ರ ಮಂತ್ರಿಗಳ ಜೊತೆ ಕಾರ್ಯ ನಿರ್ವಹಿಸಿದ್ದಾರೆ. ಈಗ ಉನ್ನತ ಹುದ್ದೆಯಲ್ಲಿ ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿರುವ ಲೋಕಸಭೆಯಲ್ಲಿ ಇವರು ಜಂಟಿ ಕಾರ್ಯದರ್ಶಿಗಳಾಗಿ ನೇಮಕಗೊಂಡು ಕಳೆದ ಐದು ವರ್ಷ ಕರ್ನಾಟಕದಲ್ಲಿ ಸೇವೆ ಸಲ್ಲಿಸಿದ ತರುವಾಯ ಮತ್ತೆ ದೆಹಲಿಗೆ ಬಂದಿದ್ದಾರೆ.

ಲೋಕಸಭೆಯಲ್ಲಿ ಅತಿ ಗೌರವಾನ್ವಿತ ಹುದ್ದೆ ಜಂಟಿ ಕಾರ್ಯದರ್ಶಿಗಳದ್ದು. ಸದ್ಯದಲ್ಲೇ ಹೆಚ್ಚುವರಿ ಕಾರ್ಯದರ್ಶಿ ಸ್ಥಾನವು ಬರುವ ಎರಡು ಮೂರು ತಿಂಗಳಲ್ಲಿ ಅವರಿಗೆ ಸಿಗಬಹುದು. ಕರ್ನಾಟಕದ ಕೋಲಾರ ಜಿಲ್ಲೆಯವರಾದ ಶ್ರೀ ಸೋಮಶೇಖರ್‌ರವರು ಅನೇಕ ಕೇಂದ್ರ ಮಂತ್ರಿಗಳ ಆಪ್ತ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದಾರೆ. ರಾಜ್ಯದ ಹಿಂದಿನ ಉಪ ಮುಖ್ಯಮಂತ್ರಿಗಳಾದ ಪ್ರಸ್ತುತ ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರ ಕಾರ್ಯದರ್ಶಿಯಾಗಿ, ಬಿಡಿಎ ಅಧ್ಯಕ್ಷರಾದ ಶ್ರೀ ವಿಶ್ವನಾಥ್ ಅವರ ಆಪ್ತರಾಗಿ ಕೆಲಸ ಮಾಡಿ ಮತ್ತೆ ದೆಹಲಿಗೆ ಬಂದಿರುವ ಶ್ರೀ ಸೋಮಶೇಖರ್ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಆದಷ್ಟು ಬೇಗನೆ ಅವರು ಪಾರ್ಲಿಮೆಂಟ್‌ನ ಕಾರ್ಯದರ್ಶಿಗಳಾಗಲೆಂದು ಶುಭ ಹಾರೈಸುತ್ತೇನೆ.

***ಸಿ.ಎಂ. ನಾಗರಾಜ***
ಅಧ್ಯಕ್ಷರು, ದೆಹಲಿ ಕರ್ನಾಟಕ ಸಂಘ



ಪರಮಪೂಜ್ಯ ಶ್ರೀ ಶ್ರೀ ಪರಮಾತ್ಮನಂದ ಸರಸ್ವತಿ ಸ್ವಾಮೀಜಿಯವರನ್ನು, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಭೇಟಿ ಮಾಡಿ ಆಶೀರ್ವಾದ ಪಡೆದ ದೃಶ್ಯ.

## ಅಭಿನಂದನೆ

### ಗ್ರೇಟರ್ ನೋಯ್ಡಾ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಅಥಾರಿಟಿ(GNIDA)ಯ ಸಿಇಒ ಆಗಿ **ಶ್ರೀ ಎನ್.ಜಿ. ರವಿಕುಮಾರ್ ಐಎಎಸ್ ಅಧಿಕಾರ ಸ್ವೀಕಾರ**



ಆತ್ಮೀಯ ಬಂಧುಗಳೇ, ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸಂದರ್ಭದಲ್ಲಿ ಅನೇಕ ಹಿರಿಯ ಐಎಎಸ್, ಐಪಿಎಸ್ ಅಧಿಕಾರಿಗಳು ನಮಗೆ ಸಹಕಾರ ನೀಡಿದ್ದಾರೆ. ಅದರಲ್ಲಿ ಈ ಅಮೃತ ಮಹೋತ್ಸವ ಸಂದರ್ಭದಲ್ಲಿ ನಾವು ದೆಹಲಿ ಕರ್ನಾಟಕ ಸಂಘಕ್ಕೆ ಒಂದು ಹೊಸ ಜಾಗವನ್ನ ತೆಗೆದುಕೊಳ್ಳಬೇಕೆಂಬ ಪ್ರಯತ್ನದಲ್ಲಿ ಇದ್ದೇವೆ. ಈಗಾಗಲೇ ಈ ನಿಟ್ಟಿನಲ್ಲಿ ಉತ್ತರಪ್ರದೇಶದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಯೋಗಿ ಆದಿತ್ಯನಾಥ್‌ರವರನ್ನು ಸಂಪರ್ಕಿಸಿದ್ದೇವೆ. ಈಗ ಮುಖ್ಯವಾಗಿ ನಾವು ಉತ್ತರಪ್ರದೇಶದ ನೋಯ್ಡಾ ಅಥವಾ ಗ್ರೇಟರ್ ನೋಯ್ಡಾ ವ್ಯಾಪ್ತಿಯಲ್ಲಿ ತೆಗೆದುಕೊಳ್ಳುವ ಜಾಗಕ್ಕೆ ಅನೇಕ ಅಧಿಕಾರಿಗಳ ಸಹಕಾರ ಬೇಕಾಗುತ್ತದೆ.

ಒಂದು ಸಂತಸದ ವಿಷಯವೇನೆಂದರೆ ಈಗ ಗ್ರೇಟರ್ ನೋಯ್ಡಾ ಕೈಗಾರಿಕಾ ಅಭಿವೃದ್ಧಿ ಪ್ರಾಧಿಕಾರದ (GNIDA) ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ (ಸಿಇಒ) ಆಗಿ ಹಿರಿಯ ಐಎಎಸ್ ಅಧಿಕಾರಿಗಳಾದ ಶ್ರೀ ರವಿಕುಮಾರ್ ಎನ್.ಜಿ.ರವರು ಅಧಿಕಾರ ಸ್ವೀಕರಿಸಿರುವುದು ದೆಹಲಿ ಎನ್‌ಸಿಆರ್ ಕನ್ನಡಿಗರಿಗೆ ಹೆಮ್ಮೆಯ ವಿಷಯ. ಶ್ರೀಯುತ ರವಿ ಸರ್ ಅವರು ಸಾಹಿತ್ಯದ ವಿದ್ಯಾರ್ಥಿ. ದೆಹಲಿ ಕರ್ನಾಟಕ ಸಂಘಕ್ಕೆ ಅವರು ಬಹಳಷ್ಟು ಸಹಕಾರ ನೀಡಿದ್ದಾರೆ. ಕೇಂದ್ರದ ಮಂತ್ರಿಗಳ ಜೊತೆಗೆ ಇದ್ದಾಗ ಸದಾ ನಮ್ಮ ಜೊತೆ ನಿಂತವರು. ಈ ಅಮೃತ ಮಹೋತ್ಸವ ಸಂದರ್ಭದಲ್ಲಿ ವರ್ಗಾವಣೆಯಾಗಿ ದೆಹಲಿ ಪಕ್ಕದ ಗ್ರೇಟರ್ ನೋಯ್ಡಾ ನಗರಕ್ಕೆ ಬಂದಿರುವ ಶ್ರೀ ರವಿಕುಮಾರ್ ಸರ್ ರವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

***ಸಿ.ಎಂ. ನಾಗರಾಜ***
ಅಧ್ಯಕ್ಷರು, ದೆಹಲಿ ಕರ್ನಾಟಕ ಸಂಘ

# ಅಗಲಿದ ಹಿರಿಯ ಕನ್ನಡತಿ ಶ್ರೀಮತಿ ನೇತ್ರಾವತಿ ಮಯ್ಯರವರಿಗೆ ದೆಹಲಿ ಕರ್ನಾಟಕ ಸಂಘದಲ್ಲಿ ಗೀತ ನಮನದ ಶ್ರದ್ಧಾಂಜಲಿ




ಇತ್ತೀಚೆಗೆ, ದಿನಾಂಕ 31.05.2023ರಂದು ನಿಧನರಾದ ಸಂಘದ ಆಜೀವ ಸದಸ್ಯರು ಹಾಗೂ ಹಿರಿಯ ಕನ್ನಡತಿ ಶ್ರೀಮತಿ ನೇತ್ರಾವತಿ ಮಯ್ಯರವರು ಅಪಾರ ಸಂಖ್ಯೆಯ ಅವರ ಅಭಿಮಾನಿಗಳನ್ನು ಮತ್ತು ದೆಹಲಿ ಕನ್ನಡಿಗರನ್ನು ಬಿಟ್ಟು ಹೋಗಿದ್ದಾರೆ. ಅವರ ಸ್ಮರಣಾರ್ಥ ದಿನಾಂಕ 25.06.2023ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಜನಕಪುರಿ ಕನ್ನಡ ಕೂಟದೊಂದಿಗೆ ಸಂಯುಕ್ತ ಆಶ್ರಯದಲ್ಲಿ ನಡೆದ ಗೀತ ನಮನ ಕಾರ್ಯಕ್ರಮದಲ್ಲಿ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜರ ಜೊತೆ ಗೀತನಮನದಲ್ಲಿ ಭಾಗಿಯಾದ ದೆಹಲಿ ಕನ್ನಡಿಗರು ಒಂದು ನಿಮಿಷ ಮೌನ ಆಚರಿಸುವುದರ ಮೂಲಕ ಇಹಲೋಕ ತ್ಯಜಿಸಿದ ಶ್ರೀಮತಿ ನೇತ್ರಾವತಿ ಮಯ್ಯರವರ ಆತ್ಮಕ್ಕೆ ಚಿರಶಾಂತಿ ಕೋರಲಾಯಿತು. ಶ್ರೀ ಸಿ.ಎಂ. ನಾಗರಾಜರು ಮಾತನಾಡಿ ದೆಹಲಿ ಕರ್ನಾಟಕ ಸಂಘದ ಹೊಸ ಸಮುಚ್ಚಯ ಕಟ್ಟುವ ಸಮಯದಲ್ಲಿ ಶ್ರೀಮತಿ ನೇತ್ರಾವತಿ ಮಯ್ಯರವರು ನೀಡಿದ ಸುಮಾರು ರೂ.2.75 ಲಕ್ಷದ ದೇಣಿಗೆ ಅಂದಿನ ದಿನಗಳಲ್ಲಿ ಮಹತ್ತರ ಕೊಡುಗೆಯಾಗಿತ್ತು. ಅವರು ನಮ್ಮನ್ನೆಲ್ಲ ಅಗಲಿರುವುದು ಬಹಳ ದುಃಖದ ವಿಷಯ. ತಾವು ಬೆಂಗಳೂರಿನಲ್ಲಿದ್ದ ಕಾರಣ ಅವರ ಕೊನೆಯ ದಿನಗಳಲ್ಲಿ ಭೇಟಿಯಾಗಲು ಹಾಗೂ ಅವರು ನಿಧನರಾದ ದಿನ ಅಂತಿಮ ದರ್ಶನ ಪಡೆಯಲು ಸಾಧ್ಯವಾಗಲಿಲ್ಲ ಎಂಬ ದುಃಖವಿದೆ. ಸಂಘದ ಅಮೃತ ಮಹೋತ್ಸವ ಹಿನ್ನೆಲೆಯಲ್ಲಿ ಅವರನ್ನೂ ಸಹ ಗೌರವಿಸಿ ಸನ್ಮಾನಿಸಬೇಕೆಂದಿದ್ದೆವು. ಆದರೆ ಅನಾರೋಗ್ಯ ಕಾರಣ ಅವರು ಬರಲು, ನಮ್ಮ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗಿರಲಿಲ್ಲ ಎನ್ನುತ್ತಾ ಶ್ರೀಮತಿ ನೇತ್ರಾವತಿ ಮಯ್ಯ ಅವರು ದೆಹಲಿ ಕರ್ನಾಟಕ ಸಂಘದಲ್ಲಿ ಈ ಹಿಂದೆ ಡಾ. ಸರೋಜಿನಿ ಮಹಿಷಿಯವರ ಸಮಯದಲ್ಲಿ ಸಂಘಕ್ಕೆ ಭೇಟಿ ನೀಡಿದ ಕ್ಷಣಗಳನ್ನು, ಅನಂತರ ಹಲವಾರು ಬಾರಿ ಸಂಘದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಸಂದರ್ಭಗಳನ್ನ ನೆನಪಿಸಿಕೊಳ್ಳುತ್ತಾ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರ ವಾಗಿ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ ಎಂದರು. ಸಂಘಕ್ಕೆ ಅವರು ನೀಡಿದ ಕೊಡುಗೆ ಮತ್ತು ಮಾಡಿದ ಸೇವೆಯನ್ನು ಗುರುತಿಸಿ 2009ರಲ್ಲಿ ದೆಹಲಿ ಕರ್ನಾಟಕ ಸಂಘದಿಂದ ಶ್ರೀಮತಿ ನೇತ್ರಾವತಿ ಮಯ್ಯರವರಿಗೆ, ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ ಮಾಡಿರುವುದನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುತ್ತಾ ಅವರ ಸೇವಾ ಮನೋಭಾವ ಮತ್ತು ತ್ಯಾಗಮಯಿ ಜೀವನ ಎಲ್ಲಾ ದೆಹಲಿ ಕನ್ನಡಿಗರಿಗೆ ಮಾದರಿಯಾಗಲಿ ಎಂದು ತಮ್ಮ ನಮನಗಳನ್ನು ಸಲ್ಲಿಸಿದರು. ಇದೇ ಸಂದರ್ಭ, ಇತ್ತೀಚಿಗೆ ನಿಧನರಾದ ದೆಹಲಿ ಕರ್ನಾಟಕ ಸಂಘದ ಅಜೀವ ಸದಸ್ಯರುಗಳಾದ ಶ್ರೀ ಹರಿಶ್ಚಂದ್ರ ಬಂಟ್ವಾಳ್ ಶ್ರೀ ಶಿವಾನಂದ ಹೆಬ್ಬಾರ್ ಮತ್ತು ಶ್ರೀ ಟಿ.ಪಿ. ಭಟ್‌ರವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತೇನೆ ಎಂದರು. ಕಾರ್ಯಕ್ರಮವನ್ನು ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್ ನಿರೂಪಿಸುತ್ತಾ, ಮನುಷ್ಯನ ಜೀವನದಲ್ಲಿ ಸಾವು ಖಚಿತ, ಆದರೆ ಆತ್ಮ ಸದಾ ಅಮರ ಎಂದು ಹೇಳಿದರು. ದ.ರಾ. ಬೇಂದ್ರೆಯವರ 'ನೀ ಹಿಂಗ ನೋಡ ಬೇಡ ನನ್ನ' ಎಂಬ ಶೋಕ ಗೀತೆಯನ್ನು ಹಾಡಿ ತಾಯಿ ಸಮಾನರಾಗಿದ್ದಂತಹ ಶ್ರೀಮತಿ ನೇತ್ರಾವತಿ ಮಯ್ಯರವರು ಕನ್ನಡಿಗರ ಮಧ್ಯೆ ಮತ್ತೆ ಹುಟ್ಟಿ ಬರಲಿ ಎಂದು ಪ್ರಾರ್ಥಿಸಿದರು.

ಶ್ರೀ ಭೀಮಸೇನ ಭಜಂತ್ರಿ ಮತ್ತು ಸಂಗಡಿಗರು ಅಲ್ಲಮಪ್ರಭುರವರ ವಚನಗೀತೆ, ಪುರಂದರದಾಸರ ಗೀತೆ, ಗುರುವಿನ ನುಡಿ, ಕಬೀರದಾಸರ ಹಾಡುಗಳನ್ನು ಹಾಗು ಒಂದು ಹಿಂದಿ ಗೀತೆಯನ್ನು ಮನಮಿಡಿಯುವಂತೆ ಶುಶ್ರಾವ್ಯವಾಗಿ ಹಾಡಿ, ಅಗಲಿದ ಹಿರಿಯ ಚೇತನಕ್ಕೆ ಗೀತ ನಮನ ಸಲ್ಲಿಸಿದರು.

ಜನಕಪುರಿ ಕನ್ನಡ ಕೂಟದ ಮಾಜಿ ಕಾರ್ಯದರ್ಶಿ ಹಾಗು ಗುರುಗೋವಿಂದ್

ಸಿಂಗ್ ಇಂದ್ರಪ್ರಸ್ಥ ವಿಶ್ವವಿದ್ಯಾಲಯದ ಪರೀಕ್ಷಾ ನಿಯಂತ್ರಕರಾದ ಡಾ. ಎಸ್.ಎಲ್. ಭಂಡಾರ್‌ಕರ್‌ರವರು ಮಾತನಾಡಿ ಆ ಕಾಲದಲ್ಲಿ ಜನಕಪುರಿ ಕನ್ನಡ ಕೂಟ ಆರ್ಥಿಕವಾಗಿ ಅಷ್ಟೊಂದು ಉತ್ತಮ ಸ್ಥಿತಿಯಲ್ಲಿರಲಿಲ್ಲ. ಆಗ ಶ್ರೀಮತಿ ನೇತ್ರಾವತಿ ಮಯ್ಯನವರು ನೀಡಿದ ಧನ ಸಹಾಯವನ್ನು ನಾವು ಎಂದೂ ಮರೆಯುವಂತಿಲ್ಲ. ಜನಕಪುರಿ ಮಹಿಳಾ ಮಂಡಳಿಗೂ, ದೆಹಲಿ ಕರ್ನಾಟಕ ಸಂಘಕ್ಕೂ, ಇತರೆ ಸಂಘ ಸಂಸ್ಥೆಗಳಿಗೆ ಅವರು ಉದಾರ ಮನಸ್ಸಿನಿಂದ ಧನ ಸಹಾಯ ಮಾಡಿದ್ದಾರೆ. ಕನ್ನಡ ಕೂಟದ ಗಣೇಶ ಹಬ್ಬದ ಸಮಯದಲ್ಲಿ ಪ್ರತಿ ವರ್ಷ 15,000/– ರೂ.ಗಳ ದೇಣಿಗೆ ನೀಡುತ್ತಿದ್ದರು. ಮಯ್ಯ ಅಂದರೆ ತಾಯಿ. ಅವರು ಮಾತೃ ಸ್ಥಾನದಲ್ಲಿ ನಿಂತು ನಮ್ಮೆಲ್ಲರಿಗೂ ಮಾರ್ಗದರ್ಶನ ಮಾಡುತ್ತಿದ್ದರು. ನಾವುಗಳು ಜನಕಪುರಿ ಕನ್ನಡ ಕೂಟದ ಮೀಟಿಂಗ್ ಅನ್ನು ಎಷ್ಟೋ ಬಾರಿ ಅವರ ಮನೆಯಲ್ಲೇ ಮಾಡುತ್ತಿದ್ದೆವು. ಅವರಿಗೆ 'ಕನ್ನಡ ಕೂಟ ರತ್ನ' ಪ್ರಶಸ್ತಿಯನ್ನೂ ನೀಡಿ ಗೌರವಿಸಿದ್ದೆವು. ಅವರು ನಮ್ಮ ಜೊತೆ ಅಜರಾಮರ ಎಂದು ಹೇಳಿದರು.

ಡಾ. ಅಶೋಕ್ ಎಂ.ಈಟಿಯವರು ಮಾತನಾಡಿ ತಮಗೆ 2005–2006 ರಿಂದ ಶ್ರೀಮತಿ ನೇತ್ರಾವತಿ ಮಯ್ಯರವರು ಪರಿಚಯವಿದ್ದು ಆಯುರ್ವೇದ ಔಷಧಿಯನ್ನ ತಮ್ಮ ಸಲಹೆಯಂತೆ ಅವರು ತೆಗೆದುಕೊಳ್ಳುತ್ತಿದ್ದರು. ತಮ್ಮ ಬೆಂಗಳೂರು, ಬಾಂಬೆ, ಕಲ್ಕತ್ತಾ ನಗರಗಳಲ್ಲಿ ನಡೆಸಿದ ಜೀವನದ ಬಗ್ಗೆ ಅವರು ಆಗಾಗ್ಗೆ ನಮ್ಮಲ್ಲಿ ಹೇಳಿಕೊಳ್ಳುತ್ತಿದ್ದರು. ಸರ್.ಎಂ. ವಿಶ್ವೇಶ್ವರಯ್ಯನವರ ಜೊತೆ ಹೋಳಿಗೆ ಊಟ ಮಾಡಿದ ಕ್ಷಣಗಳನ್ನು ಮೆಲುಕು ಹಾಕುತ್ತಿದ್ದರು. ಔಷಧಿ ಗಿಡಮರಗಳ ಬಗ್ಗೆ ಮಾಹಿತಿ ಸಂಗ್ರಹಿಸುವುದು, ಮನೆಗೆ ಬಂದವರನ್ನು ಪ್ರೀತಿ ಆದರದಿಂದ ಸತ್ಕರಿಸುವುದು ಅವರ ಹೆಗ್ಗಳಿಕೆಯಾಗಿತ್ತು. ಕೊರೊನಾ ಸಂದರ್ಭ ಕಾಲು ಮುರಿದುಕೊಂಡ ನಂತರ ಅವರ ಆರೋಗ್ಯ ಕ್ಷೀಣಿಸುತ್ತಾ ಹೋಯಿತು. ಅವರು ಅಸ್ತಮಾದಿಂದ ಬಳಲುತ್ತಿದ್ದರು. ತಮ್ಮ ದೇಹವನ್ನು AIIMS ಗೆ ಮರಣಾನಂತರ ನೀಡಲು ಅವರು ಸಮ್ಮತಿಸಿದ್ದರು. AIIMS ಸಂಸ್ಥೆ ಅವರ ಮೃತ ದೇಹವನ್ನು ಸ್ವೀಕರಿಸಲು ಹಿಂಜರಿದಾಗ, ಒಂದು NGO ಮೂಲಕ ಆರ್ಮಿ ಮೆಡಿಕಲ್ ಕಾಲೇಜಿಗೆ ಅವರು ನಿಧನರಾದ ನಂತರ ಅವರ ಪಾರ್ಥೀವ ಶರೀರವನ್ನು ನೀಡಲಾಗಿದೆ. ಇಂತಹ ಮಹಾನ್ ದಾನಿ ನೇತ್ರಾವತಿ ಅಮ್ಮನವರಿಗೆ ಜನಕಪುರಿ ಕನ್ನಡ ಕೂಟದ ಪರವಾಗಿ ಶ್ರದ್ಧಾಂಜಲಿ ಅರ್ಪಿಸುತ್ತೇನೆ ಎಂದರು.

ಕರ್ಣಾಟಕ ಬ್ಯಾಂಕಿನ ಹಿರಿಯ ಅಧಿಕಾರಿಗಳಾದ ಶ್ರೀ ಹರಿಚರಣ್ ಕಾಮತ್‌ರವರು ಮಾತನಾಡಿ ತಮಗೆ ಶ್ರೀಮತಿ ಮಯ್ಯನವರು ತಾವು ಜನಕಪುರಿ ಕರ್ಣಾಟಕ ಬ್ರಾಂಚ್ ಮ್ಯಾನೇಜರ್ ಆಗಿದ್ದ ಸಮಯ 2008ರಲ್ಲಿ ಪರಿಚಯವಾಗಿದ್ದರು. ಅವರೊಂದಿಗೆ ಮಾತುಕತೆ ಮಾಡುವಾಗ ಸಕಾರಾತ್ಮಕ ಊರ್ಜದ ಸಂಚಲನವಾಗುತ್ತಿತ್ತು. ದಾನ ಶೂರ ಕರ್ಣ ನಂತೆ ಅವರು ಒಬ್ಬ ಮಹಾನ್ ದಾನಿ, ಅವರಿಗೆ ಯಕ್ಷಗಾನದ ಬಗ್ಗೆ ಬಹಳ ಆಸಕ್ತಿಯಿತ್ತು. ಯೂಟ್ಯೂಬಲ್ಲಿ ಯಕ್ಷಗಾನ ವೀಕ್ಷಿಸುತ್ತಿದ್ದರು. ಹಾಗೆಯೇ ಡಾ. ರಾಜ್‌ಕುಮಾರ್‌ರವರ ಚಿತ್ರಗಳನ್ನು ಸಿ.ಡಿ. ತರಿಸಿಕೊಂಡು ನೋಡುತ್ತಿದ್ದರು. ಅವರೊಂದಿಗೆ ಅವರ ಕೊನೆಯ ಕಾಲದಲ್ಲಿ ಅವರ ಮಗನಂತೆ ನನಗೆ ಅವರ ಸೇವೆಯನ್ನು ಮಾಡಲು ಸಿಕ್ಕ ಅವಕಾಶಕ್ಕೆ ನಾನು ಧನ್ಯ ಎಂದು ಭಾವುಕರಾಗಿ ಹೇಳುತ್ತಾ ತಮ್ಮ ಸಾವಿನಲ್ಲೂ ದೇಹವನ್ನು ದಾನ ಮಾಡಿ ಸಾರ್ಥಕಥೆಯನ್ನು ಪಡೆದ ಮಹಾಮಾತೆ ಶ್ರೀಮತಿ ನೇತ್ರಾವತಿ ಮಯ್ಯ ಎಂದು ತಮ್ಮ ನುಡಿ ನಮನ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ದೆಹಲಿ ಕರ್ನಾಟಕ ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸರವು ಕೃಷ್ಣ ಭಟ್ ಅವರು ಮಾತನಾಡಿ, ಅವರಿಂದ ಕೊಂಡದ್ದು ಕಲಿತುಕೊಂಡದ್ದು ಬಹಳಷ್ಟಿತ್ತು. ಡಾ. ಪುರುಷೋತ್ತಮ ಬಿಳಿಮಲೆಯರ ಅಧ್ಯಕ್ಷತೆಯ ಅವಧಿಯಲ್ಲಿ ಎಲ್ಲರಿಂದಲೂ ಕನಿಷ್ಠ ಒಂದು ರೂಪಾಯಿ ದೇಣಿಗೆ ಕೋರಿದಾಗ ಸಂಘದ ಹೊಸ ಸಾಂಸ್ಕೃತಿಕ ಸಮುಚ್ಚಯ ನಿರ್ಮಾಣ ಸಮಯದಲ್ಲಿ ಅವರು ತಮ್ಮ ಮಗಳ ಅಕಾಲಿಕ ಸಾವಿನಿಂದ ಅವಳ ನೆನಪಿನಲ್ಲಿ ಆ ಕಾಲದಲ್ಲಿ ನೀಡಿದ ಸುಮಾರು ಮೂರು ಲಕ್ಷ ಮೊತ್ತದ ದೇಣಿಗೆ ಈಗಿನ ಕಾಲದಲ್ಲಿ ಮೂರು ಕೋಟಿ ರೂಪಾಯಿಗಳಿಗಿಂತಲೂ ಮಿಗಿಲಾದದ್ದು. ಹಣಕ್ಕಿಂತ ಹೆಚ್ಚು ಅವರು ದಾನ ಮಾಡಿದ ಹಿಂದಿನ ಭಾವನೆಗಳು ಬಹುಮೂಲ್ಯ. 1925 ರಲ್ಲಿ ದೆಹಲಿಗೆ ಬಂದ ಅವರ ಸಂಬಂಧಿಗಳು ಮದ್ರಾಸ್ ಹೋಟೆಲನ್ನು ಆರಂಭ ಮಾಡಿದ್ದರು. ಅವರಿಗೆ ಯಕ್ಷಗಾನವೆಂದರೆ ಹೆಚ್ಚು ಇಷ್ಟವಾಗಿತ್ತು. ಅವರ ಇನ್ನೊಂದು ವಿಶೇಷ ಗುಣವೆಂದರೆ ಎಷ್ಟೇ ಕಷ್ಟಗಳು ಬಂದರೂ ಸಮಚಿತ್ತರಾಗಿ ಸನ್ನಿವೇಶಗಳನ್ನು ಎದುರಿಸುತ್ತಿದ್ದ ರೀತಿ. ಅವರ ಬದುಕಿನ ಅಂಶಗಳನ್ನು ಕಲಿಯಲು, ಅವರಂತೆ ಸನ್ನಿವೇಶಗಳನ್ನು ಎದುರಿಸುವ ಪ್ರಯತ್ನಗಳನ್ನು, ಮತ್ತು ಅವರಂತೆ ದೆಹಲಿ ಯಲ್ಲಿರುವ ಹಿರಿಯರಿಗೆ ಅನುಕೂಲವಾಗುವಂತಹ ಕೆಲಸಗಳನ್ನು ನಾವುಗಳು ಮಾಡಿದಾಗ ಮಾತ್ರ ಅದು ಅವರಿಗೆ ಸಲ್ಲಿಸುವ ನಿಜವಾದ ಶ್ರದ್ಧಾಂಜಲಿ ಆಗುತ್ತದೆ ಎಂದು ಹೇಳಿದರು. ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರ ಇಂತಹ ಸಮಾಜಮುಖಿ ಕಾರ್ಯಕ್ರಮಗಳ ಬಗ್ಗೆ ತಿಳಿಸುತ್ತಾ ತಮ್ಮ ಸಹೋದರ ಶ್ರೀ ಈಶ್ವರ್ ಭಟ್‌ರವರು ಮೈಸೂರಿನಲ್ಲಿ ವೃದ್ಧಾಶ್ರಮ ಆರಂಭಿಸುವಲ್ಲಿ ಶ್ರೀ ನಾಗರಾಜರು ನೀಡಿದ ಸಹಕಾರವನ್ನು ಸ್ಮರಿಸಿಕೊಂಡರು.

ಈ ಗೀತನಮನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು, ಸದಸ್ಯರು, ಜನಕಪುರಿ ಕನ್ನಡ ಕೂಟ ಮತ್ತು ಮಹಿಳಾ ಮಂಡಳಿ ಪದಾಧಿಕಾರಿಗಳು ಮತ್ತು ಸದಸ್ಯರು, ಹಿರಿಯ ದೆಹಲಿ ಕನ್ನಡಿಗರು, ಭಾರತ ಭಾರತಿ ಸಂಸ್ಥೆಯ ಶ್ರೀ ವಿನಯ್, ಶ್ರೀ ಜಗನ್ನಾಥ್ ಮತ್ತು ಶ್ರೀಮತಿ ಸಾಧನರಾವ್ ತಮ್ಮ ನಮನಗಳನ್ನು ಸಲ್ಲಿಸಿದರು.

ಸಂಘದ ಉಪಾಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್‌ರವರು ಶ್ರೀಮತಿ ನೇತ್ರಾವತಿ ಮಯ್ಯರವರ ನಿಸ್ವಾರ್ಥ ಸೇವೆಯನ್ನು ಸ್ಮರಿಸಿಕೊಳ್ಳುತ್ತಾ ಅವರ ಶ್ರದ್ಧಾಂಜಲಿ ಕಾರ್ಯಕ್ರಮಕ್ಕೆ ಆಗಮಿಸಿದ್ದ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸಿದರು. ಅವರ ಜೀವನದ ಆದರ್ಶವನ್ನು ಉಲ್ಲೇಖಿಸುತ್ತಾ Like her, Happiness is derived in giving, bringing smile in the face of others is immense joy. ಎಂಬಂತೆ ಉದಾರ ದಾನದ ಗುಣವನ್ನು ಎಲ್ಲರೂ ತಮ್ಮ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು, ಶ್ರೀಮತಿ ನೇತ್ರಾವತಿ ಮಯ್ಯ ಅವರಿಗೆ ಎಲ್ಲರ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿಯನ್ನು ಈ ಗೀತ ನಮನದೊಂದಿಗೆ ಅರ್ಪಿಸುತ್ತಿದ್ದೇವೆ ಎಂದು ಹೇಳಿ ಎಲ್ಲರಿಗೂ ವಂದನೆಗಳನ್ನು ಸಲ್ಲಿಸಿದರು.

**ಅಭಿಮತ ವರದಿ**



ದೆಹಲಿಯಲ್ಲಿನ ಕನ್ನಡ ಪರ ಸಂಘ ಸಂಸ್ಥೆಗಳ ಜೊತೆ ಸ್ಥಳೀಯ ಕನ್ನಡಿಗರಿಗಾಗಿ ಕಾರ್ಯಕ್ರಮ ಆಯೋಜನೆ ಕುರಿತು

# ದೆಹಲಿ ಕರ್ನಾಟಕ ಸಂಘದಲ್ಲಿ ಜಂಟಿ ಸಭೆ - ವಿಚಾರ ವಿಮರ್ಶೆ

ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಆಚರಣೆ ಹಿನ್ನೆಲೆಯಲ್ಲಿ, ಸಂಘದ ಸದಸ್ಯರು ಮತ್ತು ಇತರ ಕನ್ನಡಪರ ಸಂಘ-ಸಂಸ್ಥೆಗಳ ಸದಸ್ಯರುಗಳಿಗೆ, ಸ್ಥಳೀಯ ಕನ್ನಡಿಗರಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ವೇದಿಕೆ ಕಲ್ಪಿಸುವ ನಿಟ್ಟಿನಲ್ಲಿ ಚರ್ಚೆ ಮಾಡಲು ದಿನಾಂಕ 25.06.2023ರಂದು ಸಂಘದ ವಿಚಾರ ಸಂಕಿರಣ ಕೊಠಡಿಯಲ್ಲಿ ಜಂಟಿ ಸಭೆಯೊಂದನ್ನು ಕರೆಯಲಾಗಿತ್ತು.

ದೆಹಲಿಯಲ್ಲಿ ಸಕ್ರಿಯವಾಗಿರುವ ಸುಮಾರು 22 ಸಂಘ ಸಂಸ್ಥೆಗಳ ಪ್ರತಿನಿಧಿಗಳನ್ನು, ಪದಾಧಿಕಾರಿಗಳನ್ನು, ವಿಚಾರ ವಿಮರ್ಶೆ ಮಾಡಲು ಆಹ್ವಾನಿಸಲಾಗಿತ್ತು. ಸಭೆಯಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜರವರು ಮಾತನಾಡಿ ಮಾತೃ ಸಂಸ್ಥೆಯ ಸ್ಥಾನದಲ್ಲಿರುವ ನಮ್ಮ ಸಂಘವು ನಮ್ಮ ಸದಸ್ಯರ ಜೊತೆ ಜೊತೆಗೆ, ದೆಹಲಿಯಲ್ಲಿ ನೊಂದಾಯಿತವಾಗಿರುವ ಸಂಘ ಸಂಸ್ಥೆಗಳ ಸದಸ್ಯರುಗಳಿಗೆ ಅನುಕೂಲವಾಗುವಂತಹ ಎರಡು ದಿನಗಳ ಸಾಂಸ್ಕೃತಿಕ ಕಾರ್ಯಕ್ರಮಗಳನ್ನ ಸಂಘದ ವೇದಿಕೆಯಲ್ಲಿ ಆಯೋಜನೆ ಮಾಡುವ ಮತ್ತು ಈ ಮೂಲಕ ಸ್ಥಳೀಯ ಕಲಾವಿದರಿಗೆ ಅವಕಾಶ ನೀಡುವ ಹಿನ್ನೆಲೆಯನ್ನು ವಿವರಿಸಿದರು. ಬರುವ ಆಗಸ್ಟ್ ತಿಂಗಳಿನಲ್ಲಿ ದೆಹಲಿ ಕರ್ನಾಟಕ ಸಂಘದಿಂದ ಸ್ಥಳೀಯ ಸಂಘ-ಸಂಸ್ಥೆಗಳ ಜೊತೆ ಸಾಂಸ್ಕೃತಿಕ ಉತ್ಸವ / ಮಿಲನ / ಹಬ್ಬದ ರೂಪದಲ್ಲಿ ಕಾರ್ಯಕ್ರಮವನ್ನು ಏರ್ಪಡಿಸುವ ಯೋಜನೆಗಳನ್ನು ಹಂಚಿಕೊಂಡರು. ಪ್ರತಿಯೊಂದು ಸಂಘಗಳಿಗೆ ಸುಮಾರು 10 ರಿಂದ 30 ನಿಮಿಷಗಳವರೆಗೆ ಕಾರ್ಯಕ್ರಮ ನೀಡಲು ಅವಕಾಶ ಕಲ್ಪಿಸಿಕೊಡಲಾಗುವುದು ಎಂದು ತಿಳಿಸುತ್ತಾ ಆಯಾ ಸಂಘ ಸಂಸ್ಥೆಗಳಿಂದ ಯಾವ ರೀತಿ ಕಾರ್ಯಕ್ರಮಗಳನ್ನು ರೂಪಿಸಬಹುದು, ಹೇಗೆ ಮುಂದುವರಿಯಬಹುದು ಎಂಬ ಸಲಹೆಗಳನ್ನು ಎಲ್ಲ ಪ್ರತಿನಿಧಿಗಳಿಂದ ಕೋರಿದರು.

ಜನಕಪುರಿ ಕನ್ನಡ ಕೂಟ ಮತ್ತು ಮಹಿಳಾ ಮಂಡಳಿ ವತಿಯಿಂದ ಡಾ. ಎಸ್.ಎಲ್. ಭಂಡಾರ್‌ಕರ್, ಡಾ. ಅಶೋಕ್ ಎಂ.ಈಟಿ, ಡಾ. ಬಸವರಾಜ್ ತಮ್ಮ ಸಲಹೆಗಳನ್ನು ನೀಡುತ್ತಾ ಮಕ್ಕಳು ಮತ್ತು ಮಹಿಳೆಯರು ಹೆಚ್ಚಾಗಿ ಭಾಗವಹಿಸಬಹುದು, ಸುಮಾರು ಅರ್ಧಗಂಟೆ ಕಾರ್ಯಕ್ರಮ ನೀಡಬಹುದು ಎಂದರು.

ಸ್ನೇಹಾ ಕನ್ನಡ ಲೇಡೀಸ್ ಅಸೋಸಿಯೇಷನ್ ನಿಂದ ಅಧ್ಯಕ್ಷೆ ಶ್ರೀಮತಿ ಸರೋಜ ಮಾಧವ ಮತ್ತು ಶ್ರೀಮತಿ ರತ್ನ ಅವರು ಇದು ಒಂದು ಉತ್ತಮ ಯೋಜನೆ, ನಾವು ಸಹಕಾರ ನೀಡುತ್ತೇವೆ, ಕಾರ್ಯಕ್ರಮದಲ್ಲಿ ಭಾಗವಹಿಸುತ್ತೇವೆ ಎಂದರು. ಬಸವ ಇಂಟರ್ ನ್ಯಾಷನಲ್ ಸೆಂಟರ್ ಉಪಾಧ್ಯಕ್ಷರಾದ ಶ್ರೀ ವಿ.ವಿ. ಬಿರಾದಾರ ಅವರು ಮಾತನಾಡಿ ಶನಿವಾರ ಅರ್ಧ ದಿನ ಮತ್ತು ಭಾನುವಾರ ಪೂರ್ತಿ ದಿನ ಕಾರ್ಯಕ್ರಮ ಆಯೋಜನೆ ಮಾಡಬಹುದು. ಸಾಧ್ಯವಾದರೆ ಸೆಪ್ಟೆಂಬರ್ 17ನೇ ತಾರೀಕು ಕಲ್ಯಾಣ ಕರ್ನಾಟಕ ವಿಮೋಚನಾ ದಿನದಂದು ಈ ಕಾರ್ಯಕ್ರಮವನ್ನು ಆಯೋಜಿಸಬಹುದು ಎಂದು ಸಲಹೆ ನೀಡಿದರು.

ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷರಾದ ಶ್ರೀ ಶ್ರೀಕಂಠ ಚೌಕೀಮಠ ಮತ್ತು ಸದಸ್ಯ ಶ್ರೀ ಮಹೇಶ್ ಕೋಳಿವಾಡ್ ಅವರು ಮಾತನಾಡಿ, ನಮ್ಮ ಸಂಸ್ಥೆ 117 ವರ್ಷಗಳ ಹಿಂದಿನಿಂದ ಸಾಮಾಜಿಕ, ಆಧ್ಯಾತ್ಮಿಕ ಮತ್ತು ಸಂಗೀತ ಕ್ಷೇತ್ರಗಳಲ್ಲಿ ಚಾರಿತ್ರಿಕ ಕೊಡುಗೆಗಳನ್ನು ನೀಡುತ್ತಾ ಬಂದಿದೆ, ಶಿವಯೋಗ, ಆಧ್ಯಾತ್ಮ, ವಚನ ಗಾಯನ, ಪ್ರವಚನದಂತಹ ಮೂವತ್ತು ನಿಮಿಷಗಳ ಕಾರ್ಯಕ್ರಮ ತಾವು ನೀಡುತ್ತೇವೆ, ಹೊರಗಿನಿಂದ ಬೇಕಾದರೆ ತಾವು ಕಲಾವಿದರನ್ನು ಕರೆಸಿಕೊಂಡು ಸಹ ಈ ರೀತಿಯ ಕಾರ್ಯಕ್ರಮವನ್ನು ನೀಡಬಲ್ಲೆವು ಎಂದರು. ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಖಜಾಂಚಿ ಶ್ರೀರಾಮಚಂದ್ರ ಉಭಾಳೆ, ಪ್ರಧಾನ ಕಾರ್ಯದರ್ಶಿ ಶ್ರೀಮತಿ ರತ್ನ ಮತ್ತು ಕೇಂದ್ರ ಘಟಕದ ನಿರ್ದೇಶಕ ಶ್ರೀ ಅರುಣ್‌ರವರು ತಮ್ಮ ಅಮೂಲ್ಯ ಸಲಹೆಗಳನ್ನು ನೀಡಿದರು.

ಗಂಡುಗಲಿ ಮದಕರಿ ನಾಯಕ ಸಂಘ ಮತ್ತು ದೆಹಲಿ ಒಕ್ಕಲಿಗ ಗೌಡ ಸಂಘದ ವತಿಯಿಂದ ತಮ್ಮ ತಮ್ಮ ಕಾರ್ಯಕಾರಿ ಸಮಿತಿಯಲ್ಲಿ ಚರ್ಚೆ ಮಾಡಿದ ನಂತರ ದೆಹಲಿ ಕರ್ನಾಟಕ ಸಂಘಕ್ಕೆ ತಿಳಿಸಲಾಗುವುದು ಎಂಬ ಮಾಹಿತಿ ನೀಡಲಾಯಿತು. ನಾಡಪ್ರಭು ಕೆಂಪೇಗೌಡ ಫೌಂಡೇಶನ್‌ನಿಂದ ಶ್ರೀ ರಮೇಶ್ ಅವರು ಮಾತನಾಡಿ, ಈ ಕಾರ್ಯಕ್ರಮಗಳನ್ನು ಸ್ಪರ್ಧಾತ್ಮಕವಾಗಿ ಆಯೋಜಿಸಲು ಮತ್ತು ಪ್ರತಿ ವರ್ಷ ಪ್ರದರ್ಶನ ನೀಡುವವರನ್ನು ಹೊರಗಿನ ತೀರ್ಪುಗಾರರಿಂದ ನಿರ್ಧರಿಸಿ ಬಹುಮಾನಕ್ಕೆ ಆಯ್ಕೆ ಮಾಡಬೇಕೆಂದು ಸಲಹೆ ಕೊಟ್ಟರು.

ಗುರುಗಾಂವ್ ಕನ್ನಡ ಸಂಘದಿಂದ ಅಧ್ಯಕ್ಷರಾದ ಶ್ರೀ ಎಂ. ಕೃಷ್ಣಪ್ಪ, ಪ್ರಧಾನ ಕಾರ್ಯದರ್ಶಿ, ಶ್ರೀ ಚಂದ್ರಶೇಖರ ಜೋಳದರಾಶಿ ಮತ್ತು ಉಪಾಧ್ಯಕ್ಷ ಶ್ರೀ ರಾಜಕುಮಾರ ನೀಲೂರವರು ಮಾತನಾಡಿ ಆಗಸ್ಟ್ ಎರಡನೇ ಅಥವಾ ನಾಲ್ಕನೇ ವಾರದಲ್ಲಿ ಕಾರ್ಯಕ್ರಮ ಆಯೋಜಿಸಬಹುದೆಂದು ತಿಳಿಸಿದರು. ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆಯಿಂದ ಶ್ರೀ ಆನಂದ ಮುರಗೋಡ ಅವರು ಒಂದು ಸಮೂಹ ಕಾರ್ಯಕ್ರಮ ನೀಡುವುದಾಗಿ ಹೇಳಿದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಖಜಾಂಚಿಗಳಾದ ಶ್ರೀ ಎಂ. ಶಿವಪ್ಪ ಅವರು ಮಾತನಾಡಿ, ತಮ್ಮ ಅಧ್ಯಕ್ಷ ಶ್ರೀ ಚಂದ್ರಶೇಖರ ಎನ್.ಪಿ. ಅವರೊಂದಿಗೆ ಸಮಾಲೋಚನೆ ಮಾಡಿ ಮುಂದೆ ವಿಷಯ ತಿಳಿಸುವುದಾಗಿ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಗೌರವ ಖಜಾಂಚಿ ಶ್ರೀ ಸಂತೋಷ ಜೆ ಅವರು ಸ್ವಲ್ಪ ದಿನಗಳ ನಂತರ ವಿಷಯ ತಿಳಿಸುತ್ತೇವೆ ಎಂದರು. ಕರ್ನಾಟಕ ಭವನದ ವಸತಿ ನಿಲಯ ಸಮುಚ್ಚಯಗಳ ಪರವಾಗಿ ಶ್ರೀಮತಿ ವಿಮಲಾ ರಂಗನಾಥ್ ಅವರು ಸದಸ್ಯರೊಂದಿಗೆ ಸಮಾಲೋಚನೆ ಮಾಡಿ ಮುಂದೆ ವಿಷಯ ತಿಳಿಸುವುದಾಗಿ ಹೇಳಿದರು. ಸಭೆಯಲ್ಲಿ ಭಾಗವಹಿಸಿ ತಮ್ಮ ಸೂಕ್ತ ಸಲಹೆಗಳನ್ನು ಹಂಚಿ ಕೊಂಡ ಎಲ್ಲರಿಗೂ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಧನ್ಯವಾದಗಳನ್ನು ತಿಳಿಸುತ್ತಾ, ಮುಂದಿನ ದಿನಗಳಲ್ಲಿ ಕಾರ್ಯಕ್ರಮದ ದಿನಾಂಕಗಳನ್ನು ನಿರ್ಧರಿಸಿ ಮತ್ತು ವಿವರವಾದ ರೂಪುರೇಷೆಗಳನ್ನು ಸಿದ್ಧಪಡಿಸಿ ಎಲ್ಲ ಸಂಘ ಸಂಸ್ಥೆಗಳಿಗೂ ಹೆಚ್ಚಿನ ಮಾಹಿತಿ ತಿಳಿಸಲಾಗುವುದು ಹಾಗು ಈ ಬಗ್ಗೆ ಮತ್ತೊಮ್ಮೆ ಸಭೆ ಕರೆದು ಎಲ್ಲರೊಂದಿಗೆ ಚರ್ಚಿಸಿ ಅಂತಿಮಗೊಳಿಸಲಾಗುವುದು ಎಂದು ಹೇಳಿದರು. ವಿಚಾರ ವಿಮರ್ಶೆಯಲ್ಲಿ ಭಾಗವಹಿಸಿದ ಎಲ್ಲ ಸಂಘ ಸಂಸ್ಥೆಗಳ ಪದಾಧಿಕಾರಿಗಳಿಗೆ, ಪ್ರತಿನಿಧಿಗಳಿಗೆ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಕೆ.ಎಸ್. ಮೂರ್ತಿ ಅವರು ಸಂಘದ ಪರವಾಗಿ ವಂದನೆಗಳನ್ನು ಅರ್ಪಿಸಿದರು.

***ಅಭಿಮತ ವರದಿ***



## ಪಳಕಳ ಸೀತಾರಾಮ ಭಟ್ಟರ ಸ್ಮರಣೆ

ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು ದೆಹಲಿ ಘಟಕದ ವತಿಯಿಂದ ದೆಹಲಿ ಕರ್ನಾಟಕ ಸಂಘದ ಗ್ರಂಥಾಲಯದಲ್ಲಿ ಕೇಂದ್ರ ಸಾಹಿತ್ಯ ಪ್ರಶಸ್ತಿ ಪುರಸ್ಕೃತ, ಮಕ್ಕಳ ಸಾಹಿತಿ ದಿವಂಗತ ಪಳಕಳ ಸೀತಾರಾಮ ಭಟ್ಟರ ಜನ್ಮದಿನದ ಅಂಗವಾಗಿ 'ಪಳಕಳ ಸ್ಮರಣೆ' ಕಾರ್ಯಕ್ರಮವನ್ನು ಇತ್ತೀಚೆಗೆ ಆಯೋಜಿಸಲಾಗಿತ್ತು. ಪರಿಷತ್ತಿನ ಅಧ್ಯಕ್ಷ ಶ್ರೀ ಅರವಿಂದ ಬಿಜ್ಜೈ ಅವರು ನುಡಿನಮನ ಸಲ್ಲಿಸಿ ಮಾತನಾಡುತ್ತ ವೃತ್ತಿಯಲ್ಲಿ ಕನ್ನಡ ಶಿಕ್ಷಕರಾಗಿದ್ದ ಪಳಕಳ ಅವರು ಬಾಲ್ಯದಲ್ಲಿಯೇ ಸಾಹಿತ್ಯಾಸಕ್ತಿ ಹೊಂದಿದ್ದು, ಮುಂದೆ ಪಂಜೆಯವರ ಪ್ರೇರಣೆಯಿಂದ ಮಕ್ಕಳ ಸಾಹಿತ್ಯದೆಡೆಗೆ ಒಲವು ತೋರಿ ಮಕ್ಕಳ ಕವನ ಸಂಕಲನ, ಕಥಾ ಸಂಕಲನ, ನಾಟಕ, ಜೀವನ ಚರಿತ್ರೆ ಹೀಗೆ ಒಟ್ಟು 140ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ತಮ್ಮ ಸ್ವಂತ ಆದಾಯದಿಂದ ಪಳಕಳ ಪ್ರತಿಷ್ಠಾನ ಸ್ಥಾಪಿಸಿ ಆರ್ಥಿಕವಾಗಿ ಹಿಂದುಳಿದ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗಿ ಸಮಾಜ ಸೇವೆಯತ್ತ ಮನಸ್ಸನ್ನು ತೆರೆದುಕೊಂಡವರು. ಪಠ್ಯಪುಸ್ತಕ ರಚನಾ ಸಮಿತಿ ಸದಸ್ಯರಾಗಿದ್ದ ಪಳಕಳ ಅವರು ಹಾಸನದಲ್ಲಿ ನಡೆದ ಸಮ್ಮೇಳನದಲ್ಲಿ ಮಕ್ಕಳ ಸಾಹಿತ್ಯ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಹೂವಾದಳು ಹುಡುಗಿ, ಕಟಂ ಕಟಂ ಕಪ್ಪೆಯಣ್ಣ, ಗಡಿಬಿಡಿ ಗುಂಡ, ಮಿಠಾಯಿ ಗೊಂಬೆ, ಪುಟ್ಟ ಬಿಲ್ಲಿ ಮುಂತಾದವು ಮಕ್ಕಳಿಗಾಗಿ ರಚಿತವಾದ ಅವರ ಕೃತಿಗಳು. ಪಳಕಳರ ಸಾಹಿತ್ಯವನ್ನು ಮಕ್ಕಳಿಗೆ ತಲುಪಿಸುವ ಮೂಲಕ ಮಕ್ಕಳ ಸಾಹಿತ್ಯವನ್ನು ಬೆಳೆಸಿ ಮುನ್ನಡೆಸುವ ಜವಾಬ್ದಾರಿ ನಾವೆಲ್ಲರೂ ವಹಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ರಾಜ್ಯ ಸಂಘಟನಾ ಕಾರ್ಯದರ್ಶಿ ಶ್ರೀ ಸಿ.ಎಸ್. ಮನೋಹರ್ ಅವರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಶ್ರೀ ಪುಟ್ಟಣ್ಣ ಗೋಕಾಕ್, ಛಾಯಾಗ್ರಾಹಕ ಶ್ರೀ ಗಿರೀಶ್ ಬೆಳವಾಡಿ, ಪರಿಷತ್ತಿನ ಕೇಂದ್ರ ಘಟಕದ ನಿರ್ದೇಶಕ ಶ್ರೀ ಅರುಣ್, ಪರಿಷತ್ತಿನ ಉಪಾಧ್ಯಕ್ಷೆ ಶ್ರೀಮತಿ ಮಾಲಿನಿ ಪ್ರಹ್ಲಾದ್, ಉಪಾಧ್ಯಕ್ಷ ಶ್ರೀ ಕೆ.ಎಸ್. ಮೂರ್ತಿ, ಸಂಚಾಲಕ ಶ್ರೀ ಗೋಪಾಲಕೃಷ್ಣ ಭಟ್, ಸಂಘಟನಾ ಕಾರ್ಯದರ್ಶಿ ಶ್ರೀ ಯಲ್ಲಾಲಿಂಗ ಕೊಪ್ಪದ, ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ಶ್ರೀಮತಿ ಸುಜಾತ ನಿಂಬಾಳ, ಶ್ರೀಮತಿ ವಿಮಲಾ ರಂಗನಾಥ್, ಶ್ರೀ ನಾಗರಾಜ ಎನ್. ಉಪಸ್ಥಿತರಿದ್ದರು. ಖಜಾಂಚಿ ಶ್ರೀ ರಾಮಚಂದ್ರ ಉಭಾಳೆ ಸ್ವಾಗತಿಸಿದರು. ಸಂಚಾಲಕ ಕೃಷ್ಣರಾಜ್ ವಂದನಾರ್ಪಣೆ ಸಲ್ಲಿಸಿದರು. ಪ್ರಧಾನ ಕಾರ್ಯದರ್ಶಿ ಶ್ರೀಮತಿ ರತ್ನ ಕಾರ್ಯಕ್ರಮ ನಿರೂಪಿಸಿದರು.

## ನನ್ನ ಅಪ್ಪ ನನ್ನ ಆದರ್ಶ

ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು ದೆಹಲಿ ಘಟಕದ ವತಿಯಿಂದ 18.06.2023 ರಂದು ನಿಸ್ತಂತು ಮಾಧ್ಯಮದ ಮೂಲಕ ಕನಸುಗಳ ರೂವಾರಿ ಸ್ಫೂರ್ತಿಯ ಚಿಲುಮೆ, ಅನನ್ಯ ಬಾಂಧವ್ಯದ ಪ್ರತೀಕ, ಬದುಕಿಗೆ ಆಸರೆಯಾಗಿ ನಿಲ್ಲುವ, ತನ್ನ ಸರ್ವಸ್ವವನ್ನೇ ಕುಟುಂಬಕ್ಕೆ, ಮಕ್ಕಳಿಗೆ ಒತ್ತೆ ಇಡುವ ಅಪ್ಪನಿಗಾಗಿ ಆಚರಿಸುವ ವಿಶ್ವ ಅಪ್ಪಂದಿರ ದಿನಾಚರಣೆ ಪ್ರಯುಕ್ತ "ನನ್ನ ಅಪ್ಪ ನನ್ನ ಆದರ್ಶ" ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಕಲಾ ಪೋಷಕರಾದ ಶ್ರೀ ಶರಶ್ಚಂದ್ರ ಎಸ್. ಶೆಟ್ಟಿ ಅವರು ಮಾತನಾಡಿ ಪುಸ್ತಕದಲ್ಲಿ ಕಲಿಯಲಾಗದ ಎಷ್ಟೋ ಜೀವನ ಪಾಠಗಳನ್ನು ಅಪ್ಪನಿಂದ ಕಲಿಯುತ್ತೇವೆ. ಅಪ್ಪನೊಂದಿಗಿನ ಹೆಜ್ಜೆಯ ಗುರುತುಗಳು ಭಯದ ಭೂತವನ್ನು ಬೆನ್ನತ್ತಿ ಆತ್ಮವಿಶ್ವಾಸವನ್ನು ಮೂಡಿಸುವುದು. ನಮ್ಮ ಬದುಕಿನುದ್ದಕ್ಕೂ ಸಲಹೆಗಾರನಾಗಿ, ಮಾರ್ಗದರ್ಶಕನಾಗಿ ಸಮಾಜದಲ್ಲಿ ಗೌರವಯುತವಾದ ಬದುಕಿಗಾಗಿ ಮುನ್ನುಡಿ ಬರೆಯುವವನು, ತಾನು ಕಷ್ಟವನ್ನು ಅನುಭವಿಸಿದರೂ, ನೋವನ್ನು ಉಂಡರೂ ತನ್ನ ಮಕ್ಕಳ ಮುಖದಲ್ಲಿ ನಗುವ ಬಯಸುವವನೇ ಅಪ್ಪ. ಇಂತಹ ಅಪ್ಪನ ಬಗ್ಗೆ ಮಕ್ಕಳು ಕವಿತೆ, ಹಾಡು, ನುಡಿಮುತ್ತು ಇತರ ಪ್ರಸ್ತುತಿಗಳ ಮೂಲಕ ತಮ್ಮ ಅಭಿವ್ಯಕ್ತಿಯನ್ನು ಪ್ರಸ್ತುತಪಡಿಸುವುದು ಅನುಕರಣೀಯ ಎಂದು ಹೇಳಿದರು.

ಪರಿಷತ್ತಿನ ಮಕ್ಕಳಾದ ಸಾಯಿಶ್ರೀ ದೇಸಾಯಿ, ಧೈರ್ಯ ಜೇವೂರ್, ಶಾಶ್ವತ್, ಅವನಿ ನೆಲ್ಲಿ, ಭರತ್, ಆನಂದಿ ಗೌಡ, ಸೃಜನ್ ಆರ್., ಮೊಹಮ್ಮದ್ ಸಾಹಿಲ್, ವಿಕಾಸ್ ಗೌಡ, ಜೈನಬ್, ಶ್ರೀಹರ್ಷ ಜೇವೂರ್, ನಂದಿತಾ ಉಭಾಳೆ, ಪ್ರಥಮ್ ಜೆ. ಎನ್., ಹರ್ಷಿತಾ ಉಭಾಳೆ, ಧನ್ವಿನ್, ಆರ್ಯ ಬಿಜ್ಜೈ, ಸಾತ್ವಿಕ್ ಹೆಚ್. ತೇಲಿ, ವೇದಿಕಾ ಕುರ್ಲೆ ಇವರುಗಳು ಅಪ್ಪನ ಕುರಿತಾದ ಸ್ವರಚಿತ ಕವಿತೆ, ನುಡಿಮುತ್ತು, ವಿಚಾರಧಾರೆ, ಹಾಡು, ನೃತ್ಯ, ಚಿತ್ರಕಲೆಯನ್ನು ಪ್ರಸ್ತುತಪಡಿಸಿದರು.

ಕಾರ್ಯಕ್ರಮದಲ್ಲಿ ಪರಿಷತ್ತಿನ ಗೌರವಾಧ್ಯಕ್ಷ ಶ್ರೀ ಪಿ. ಜಯರಾಜ್, ಅಧ್ಯಕ್ಷ ಶ್ರೀ ಅರವಿಂದ ಬಿಜ್ಜೈ, ಪ್ರಧಾನ ಕಾರ್ಯದರ್ಶಿ ಶ್ರೀಮತಿ ರತ್ನ, ಖಜಾಂಚಿ ಶ್ರೀ ರಾಮಚಂದ್ರ ಉಭಾಳೆ, ಮಕ್ಕಳು, ಪೋಷಕರು ಹಾಗೂ ಹಲವು ಕನ್ನಡಿಗರು ಉಪಸ್ಥಿತರಿದ್ದರು. ಪರಿಷತ್ತಿನ ಉಪಾಧ್ಯಕ್ಷೆ ಶ್ರೀಮತಿ ಮಾಲಿನಿ ಪ್ರಹ್ಲಾದ್ ಸ್ವಾಗತಿಸಿದರು. ಸಂಚಾಲಕ ಶ್ರೀ ಕೃಷ್ಣರಾಜ್ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಉಪಾಧ್ಯಕ್ಷ ಶ್ರೀ ಕೆ.ಎಸ್. ಮೂರ್ತಿ ವಂದನೆಗಳನ್ನು ಸಲ್ಲಿಸಿದರು. ಕುಮಾರಿ ಅಪೇಕ್ಷಾ ಕಾರ್ಯಕ್ರಮ ನಿರೂಪಿಸಿದರು. ಸಂಚಾಲಕ ಶ್ರೀ ಗೋಪಾಲಕೃಷ್ಣ ಭಟ್, ಸಂಘಟನಾ ಕಾರ್ಯದರ್ಶಿ ಶ್ರೀ ಯಲ್ಲಾಲಿಂಗ ಕೊಪ್ಪದ, ಮಹಿಳಾ ಕಾರ್ಯದರ್ಶಿ ಶ್ರೀಮತಿ ಸುಜಾತ ನಿಂಬಾಳ, ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ಶ್ರೀಮತಿ ವಿಮಲಾ ರಂಗನಾಥ್, ಶ್ರೀಮತಿ ನೇತ್ರಾ ಎಸ್. ಕುಮಾರ್, ಶ್ರೀ ನಾಗರಾಜ ಎನ್., ಕುಮಾರಿ ಪೂರ್ಣಿಮಾ ಅಡಿಗ ಕಾರ್ಯಕ್ರಮ ನಿರ್ವಹಣೆಯಲ್ಲಿ ಸಹಕರಿಸಿದರು.

**ಅರವಿಂದ ಬಿಜ್ಜೈ**

# ಜನಕಪುರಿ ಮಹಿಳಾ ಮಂಡಳಿ ವತಿಯಿಂದ

## ಶ್ರೀಮತಿ ಸವಿತಾ ಇನಾಮದಾರ್ ಅವರಿಗೆ ಗೌರವ ಸನ್ಮಾನ



ದೆಹಲಿ ಕರ್ನಾಟಕ ಸಂಘದಿಂದ “ವಿಶಿಷ್ಟ ಕನ್ನಡಿಗ “ಪ್ರಶಸ್ತಿ ಪುರಸ್ಕೃತೆ ಶ್ರೀಮತಿ ಸವಿತಾ ಇನಾಮದಾರ್ ಅವರನ್ನು ಜುಲೈ ತಿಂಗಳ ಮಾಸಿಕ ಸಭೆಯಲ್ಲಿ ಜನಕಪುರಿ ಮಹಿಳಾ ಮಂಡಳಿಯ ವತಿಯಿಂದ ಅಭಿನಂದಿಸಿ ಸನ್ಮಾನಿಸಲಾಯಿತು. ಅಧ್ಯಕ್ಷೆ ಶ್ರೀಮತಿ ಮಾಲಿನಿ ಪ್ರಹ್ಲಾದ್ ಅವರು ಶ್ರೀಮತಿ ಸವಿತಾ ಇನಾಮದಾರ್ ಅವರು ದೆಹಲಿ ಕನ್ನಡಿಗರಿಗಾಗಿ ಕೊಟ್ಟ ಕೊಡುಗೆ ಹಾಗೂ ಕನ್ನಡ ಭಾಷೆ, ಕಲೆ ಹಾಗೂ ಸಂಸ್ಕೃತಿಯ ಏಳ್ಗೆಗಾಗಿ ಸಲ್ಲಿಸಿದ ಅಪಾರ ಸೇವೆಯ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದರು. ಅವರಿಗೆ ವಿಶಿಷ್ಟ ಕನ್ನಡಿಗ ಪ್ರಶಸ್ತಿ ನೀಡಿ ಗೌರವಿಸಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಹಾಗು ಕಾರ್ಯಕಾರಿ ಸಮಿತಿಗೂ ಧನ್ಯವಾದಗಳನ್ನು ತಿಳಿಸಿದರು. ಕಾರ್ಯದರ್ಶಿ ಶ್ರೀಮತಿ ನಯನಾ ಮನಕಾಪುರೆ, ಶ್ರೀಮತಿ ಉಷಾ ರಾವ್ ಹಾಗೂ ಶ್ರೀಮತಿ ಅನುಪಮಾ ಅನಿಗುಂದಿ ಮತ್ತು ಇತರ ಸದಸ್ಯರ ಸಮಕ್ಷಮದಲ್ಲಿ ಶ್ರೀಮತಿ ಸವಿತಾ ಇನಾಮದಾರ್ ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು.

ಶ್ರೀಮತಿ ಸವಿತಾ ಇನಾಮದಾರ್ ಅವರು ಎರಡು ದಶಕಕ್ಕೂ ಮಿಗಿಲು ಕಾಲ ಜನಕಪುರಿ ಮಹಿಳಾ ಮಂಡಳಿಗಾಗಿ ಸತತವಾಗಿ ಶ್ರಮಿಸಿ, ಹಲವಾರು ನಾಟಕ ಸ್ಪರ್ಧೆ ವಿಜೇತರಾಗಿ, ಜಾನಪದ ನೃತ್ಯ ಹಾಗೂ ಹಾಡುಗಳನ್ನು ದೆಹಲಿ ಕರ್ನಾಟಕ ಸಂಘದ ವೇದಿಕೆಯ ಮೇಲೆ ಪ್ರದರ್ಶಿಸಿದ್ದಾರೆ. ಅನೇಕ ಕಿರುಚಿತ್ರ ಮತ್ತು ಸಾಕ್ಷ್ಯ ಚಿತ್ರಗಳನ್ನು ನಿರ್ದೇಶಿಸಿದ್ದಾರೆ, ಹಾಗು ನಿರ್ಮಿಸಿದ್ದಾರೆ.ಇವರು ಬಹುಮುಖ ಕಲಾವಿದೆ, ಬರಹಗಾರ್ತಿ ಹಾಗೂ ದಿಗ್ದರ್ಶಕಿ. ಮಹಿಳಾ ಮಂಡಳಿಯ ಎಲ್ಲ ಸದಸ್ಯರನ್ನು ಹುರಿದುಂಬಿಸಿ ಅವರಲ್ಲಿ ಅಡಗಿರುವ ಕಲೆಯ ಸಾಧನೆಗೆ ದಾರಿದೀಪ ತೋರಿಸುವ ನಂದಾದೀಪವಾಗಿದ್ದಾರೆ. ಇವರಿಗೆ ಹಾರ್ದಿಕ ಅಭಿನಂದನೆಗಳು.

**ನಯನಾ ಮನಕಾಪುರೆ**
ಕಾರ್ಯದರ್ಶಿ, ಜನಕಪುರಿ ಮಹಿಳಾ ಮಂಡಳಿ

## ಶ್ರದ್ಧಾಂಜಲಿ



### ಶ್ರೀ ಶಿವಾನಂದ ಹೆಬ್ಬಾರ್

ಕೆನರಾ ಬ್ಯಾಂಕಿನ ಹಿರಿಯ ಅಧಿಕಾರಿಗಳೂ, ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರೂ ಆದ ಶ್ರೀ ಶಿವಾನಂದ ಹೆಬ್ಬಾರ್ ಅವರು ದಿನಾಂಕ 20.06.2023ರಂದು ನಿಧನರಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ. ದೆಹಲಿ ಕರ್ನಾಟಕ ಸಂಘದೊಂದಿಗೆ ಸಕ್ರಿಯರಾಗಿದ್ದ ಇವರು ಸಂಘದ ಚುನಾವಣಾ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದರು.



### ಶ್ರೀ ಆರ್. ಆರ್. ಸಾವಂತ್

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಶ್ರೀ ಆರ್.ಆರ್. ಸಾವಂತ್ ಅವರು ದಿನಾಂಕ 07.06.2023ರಂದು ನಿಧನರಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ.



### ಶ್ರೀ ಡೆನ್ನಿಸ್ ಡಿ'ಸೋಜ

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಶ್ರೀ ಡೆನ್ನಿಸ್ ಡಿ'ಸೋಜ ಅವರು ದಿನಾಂಕ 17.06.2023ರಂದು ನಿಧನರಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ.

**ಅಗಲಿದ ಈ ಮೂವರು ಹಿರಿಯರ ಆತ್ಮಕ್ಕೆ ಮೋಕ್ಷ ಸಿಗಲೆಂದು ಹಾಗೂ ಶ್ರೀಯುತರ ಕುಟುಂಬಗಳಿಗೆ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲೆಂದು ದೆಹಲಿ ಕರ್ನಾಟಕ ಸಂಘ ಪ್ರಾರ್ಥಿಸುತ್ತದೆ. ಸಮಸ್ತ ದೆಹಲಿ ಕನ್ನಡಿಗರಿಂದ ಭಾವಪೂರ್ಣ ಶ್ರದ್ಧಾಂಜಲಿ**


**ಶ್ರದ್ಧಾಂಜಲಿ**



**ಶ್ರೀ ಡೆನ್ನಿಸ್ ಡಿ’ಸೋಜ**


ಕರ್ನಾಟಕ ಫುಡ್ ಸೆಂಟರ್, ನೈವೇದ್ಯಂ ಗ್ರೂಪ್ ಆಫ್ ರೆಸ್ಟೋರೆಂಟ್ಸ್‌ನ ಹೆಡ್ ಕುಕ್ ಸೇವೆ ಸಲ್ಲಿಸಿದ

**ಶ್ರೀ ಡೆನ್ನಿಸ್ ಡಿ'ಸೋಜ**

ಅವರು 17.06.2023 ದೈವಾಧೀನರಾಗಿರುತ್ತಾರೆ.
ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ

**ಶ್ರೀ ಶೇಖರ್ ಎನ್. ಬಂಗೇರ**

ಮಾಲೀಕರು, ಕರ್ನಾಟಕ ಫುಡ್ ಸೆಂಟರ್,
ನೈವೇದ್ಯಂ ಗ್ರೂಪ್ ಆಫ್ ರೆಸ್ಟೋರೆಂಟ್ಸ್
ವ್ಯವಸ್ಥಾಪಕರು ಮತ್ತು ಸಿಬ್ಬಂದಿ ವರ್ಗ



ಹಿರಿಯ ಲೆಕ್ಕ ಪರಿಶೋಧಕರು ಹಾಗು ಆರ್.ಬಿ.ಐ. ನಿರ್ದೇಶಕರಾದ ಶ್ರೀ ಎನ್. ಗುರುಮೂರ್ತಿ, ಆದಿಚುಂಚನಗಿರಿ ದೆಹಲಿ ಶಾಖಾ ಮಠದ ಶ್ರೀ ಆನಂದ ಚೈತನ್ಯನಾಥ ಸ್ವಾಮೀಜಿ ಹಾಗೂ ಶ್ರೀ ಬ್ರಹ್ಮೇಶ್ವರನಂದ ಆಚಾರ್ಯರವರನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಸಂಘದಲ್ಲಿ ಭೇಟಿ ಮಾಡಿ ಸ್ಮರಣಸಂಚಿಕೆ ನೀಡಿದ ಸಂದರ್ಭ


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
**PRINTING PRESS**

A HOUSE OF QUALITY PRINTING

B-303, Okhla Industrial Area
Phase-I, New Delhi – 110 020

PHONE:
011-40520770

MOBILE:
9811104398,
9811604398

E-MAIL:
saujanyapp2010@gmail.com /
hpgp2006@gmail.com

Delhi Karnataka Sangha Abhimata
July -2023, Vol. No.33, Issue No. 10, Price Rs.1/-
RNI Regn. No. 53405/91, DL-SW-01/4016/22-24
Date of Publication : July 8th / 9th, Posting Date : 10th / 11th, Total Pages-24 Monthly-Language Kannada, POSTED AT RMS DELHI-110006
Printed & Published by R. Renukumar, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: Chandrashekara N.P



ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸ್ಮರಣಸಂಚಿಕೆ ಬಿಡುಗಡೆ ಸಮಾರಂಭದಲ್ಲಿ ಪ್ರೇಕ್ಷಕರಿಂದ ತುಂಬಿ ತುಳುಕಿದ್ದ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಸಭಾಂಗಣ

